ದೆಹಲಿ ಕರ್ನಾಟಕ ಸಂಘದ

# ಅಭಿಮತ

ನವೆಂಬರ್-2017
ಬೆಲೆ ರೂ. 1



ನೀ ಮೆಟ್ಟುವ ನೆಲ ಅದೇ ಕರ್ನಾಟಕ
ನೀನೇರುವ ಮಲೆ ಸಹ್ಯಾದ್ರಿ
ನೀ ಮುಟ್ಟುವ ಮರ ಶ್ರೀಗಂಧದ ಮರ
ನೀ ಕುಡಿಯುವ ನೀರ್ ಕಾವೇರಿ

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 28 ಸಂಚಿಕೆ 2
ನವೆಂಬರ್ 2017, ಬೆಲೆ ರೂ. 1



**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 8447288475
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ತ್ಯಾಗೇಶ್ ಮೂರ್ತಿ 9868393961
ಸಂತೋಷ್ ಜೆ. 9911235783

**ವಿಶೇಷ ಆಹ್ವಾನಿತರು**
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ


## ನೇರ ಮಾತು

ಭಾಷೆ ಆಧಾರಿತ ಭಾರತದ ರಾಜ್ಯಗಳ ಸ್ಥಾಪನೆಯ ಕಾಲದಲ್ಲಿ ಕನ್ನಡ ಭಾಷೆ ಮಾತನಾಡುವವರು ಹೆಚ್ಚಾಗಿದ್ದ ನಾಲ್ಕು ಭಾಗಗಳನ್ನು ಮೈಸೂರು ಸಂಸ್ಥಾನದೊಂದಿಗೆ ವಿಲೀನಗೊಳಿಸಿ 1956ರಲ್ಲಿ ಕರ್ನಾಟಕದ ಏಕೀಕರಣವನ್ನು ಮಾಡಲಾಯಿತು. ಮೈಸೂರು ರಾಜ್ಯಕ್ಕೆ ವಿಲೀನಗೊಂಡ ಆಗಿನ ಬೆಳಗಾವಿ, ಬಿಜಾಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಬ್ರಿಟಿಷರ ಮುಂಬಯಿ ಆಧಿಪತ್ಯಕ್ಕೂ, ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು ಬ್ರಿಟಿಷರ ಮದರಾಸಿನ ಆಧಿಪತ್ಯಕ್ಕೂ, ಬೀದರ್, ಗುಲಬರ್ಗ ಮತ್ತು ರಾಯಚೂರು ಜಿಲ್ಲೆಗಳು ಹೈದರಾಬಾದ್ ನಿಜಾಮನ ಆಳ್ವಿಕೆಗೂ ಸೇರಿದ್ದವು. ಕೊಡಗು ಜಿಲ್ಲೆಯು ಬ್ರಿಟಿಷರ ಒಂದು ಅಧೀನ ರಾಜ್ಯವಾಗಿತ್ತು.

ಮೈಸೂರು ಸಂಸ್ಥಾನದಲ್ಲಿ ಕನ್ನಡವು ಪ್ರಮುಖ ಭಾಷೆಯಾಗಿದ್ದರೂ ತಮಿಳು, ತೆಲುಗು, ದಖ್ಖನಿ ಉರ್ದು ಭಾಷೆಗಳು ಕೂಡಾ ಆ ಪ್ರದೇಶಗಳಲ್ಲಿ ಪ್ರಚಲಿತವಾಗಿದ್ದವು. ಏಕೀಕರಣದ ಸಂದರ್ಭದಲ್ಲಿ ಮಹಾರಾಷ್ಟ್ರ, ಕೇರಳ, ತಮಿಳುನಾಡು ಮತ್ತು ಆಗಿನ ಆಂಧ್ರಪ್ರದೇಶದ ಗಡಿಪ್ರದೇಶಗಳಲ್ಲಿನ ಕೆಲವು ಅಚ್ಚ ಕನ್ನಡ ಪ್ರದೇಶಗಳೂ ಕರ್ನಾಟಕ ರಾಜ್ಯದಿಂದ ಹೊರಗುಳಿದವು. ಅದೇ ರೀತಿ ಬೆಳಗಾವಿ ಸೇರಿದಂತೆ ಕೆಲವೊಂದು ಪ್ರದೇಶಗಳಲ್ಲಿ ಇತರ ಭಾಷಿಗರೂ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಏಕೀಕೃತ ಕರ್ನಾಟಕವು ಒಟ್ಟಾರೆಯಾಗಿ ಹಲವು ಭಾಷೆಗಳ ಒಂದು ಸುಂದರ ರಾಜ್ಯವಾದರೂ ಆಡಳಿತಾತ್ಮಕವಾಗಿ ಕನ್ನಡವೇ ನಮ್ಮೆಲ್ಲರ ರಾಜ್ಯಭಾಷೆಯಾಗಿದೆ.

ಕರಾವಳಿ ಕರ್ನಾಟಕದಲ್ಲಿರುವ ಭಟ್ಕಳದಲ್ಲಿ ಅರೆಬಿಕ್, ಪರ್ಶಿಯನ್, ಕೊಂಕಣಿ ಮತ್ತು ಕನ್ನಡ ಭಾಷೆಗಳ ಒಂದು ಮಿಶ್ರಭಾಷೆಯನ್ನು ಅಲ್ಲಿನ ನವಾಯತರು ಆಡುತ್ತಾರೆ. ದಕ್ಷಿಣ ಕರಾವಳಿಗೆ ಬಂದರೆ ಕೊಂಕಣಿ, ತುಳು, ಮಲಯಾಳ, ಬ್ಯಾರಿ ಭಾಷೆಗಳಲ್ಲದೆ ಕನ್ನಡದ ಉಪಭಾಷೆಯೋ ಎಂಬಂತೆ ಕುಂದಗನ್ನಡ ಮತ್ತು ಹವ್ಯಕ ಭಾಷೆಗಳಿವೆ. ಇನ್ನು ಮಲೆನಾಡಿನಂಚಿನಲ್ಲಿ ಅರೆಭಾಷೆ ಮತ್ತು ಕೊಡಗಿನಲ್ಲಿ ಕೊಡವತಕ್ಕ್ ಭಾಷೆಗಳು ಇವೆ. ಧಾರವಾಡ, ಬೆಳಗಾವಿ ಪ್ರದೇಶದಲ್ಲಿ ಹೇರಳವಾಗಿ ಮರಾಠಿ ಮಾತಾಡುವವರನ್ನು ಕಾಣಬಹುದು. ಅದೇ ರೀತಿ ಉರ್ದು, ತೆಲುಗು ಮತ್ತು ತಮಿಳು ಮಾತಾಡುವವರು ಬೆಂಗಳೂರು ಮಾತ್ರವಲ್ಲದೇ ಗಡಿಜಿಲ್ಲೆಗಳಲ್ಲಿಯೂ ಬಹಳಷ್ಟಿದ್ದಾರೆ. ಕನ್ನಡದ ಪ್ರಖ್ಯಾತ ಸಾಹಿತಿಗಳಾದ ದ.ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಿ.ವಿ. ಗುಂಡಪ್ಪ ಮೊದಲಾದವರ ಮಾತೃಭಾಷೆಗಳು ಕನ್ನಡವಾಗಿರಲಿಲ್ಲ. ನವದೆಹಲಿಯಲ್ಲಿ ನೆಲೆಸಿರುವ ಕನ್ನಡದ ಖ್ಯಾತ ನಾಟಕಕಾರ, ಕವಿ ಎಚ್. ಎಸ್. ಶಿವಪ್ರಕಾಶ್ ಅವರು ಕೂಡಾ ತಾನು ತಮಿಳು ಮೂಲದವನು ಎಂದು ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿಯೇ ಹೇಳಿದ್ದರು. ಇವರೆಲ್ಲರ ಮಾತೃಭಾಷೆಗಳು ಬೇರೆಯಾಗಿದ್ದರೂ ಅವರೆಲ್ಲರೂ ಕನ್ನಡಕ್ಕಾಗಿ ದುಡಿದಿದ್ದಾರೆ ಮತ್ತು ಅಮೂಲ್ಯವಾದ ಕೊಡುಗೆಗಳನ್ನು ನೀಡಿದ್ದಾರೆ.

ಇಂತಹ ಹತ್ತು ಹಲವು ಭಾಷೆಗಳ ತವರೂರಾದ ಕರ್ನಾಟಕದಲ್ಲಿ ನವೆಂಬರ್ ಒಂದರಿಂದ ಮೊದಲ್ಗೊಂಡು ತಿಂಗಳಾದ್ಯಂತ ಬಹಳ ವಿಜೃಂಭಣೆ ಮತ್ತು ಉತ್ಸಾಹದಿಂದ ರಾಜ್ಯೋತ್ಸವವನ್ನು ಎಲ್ಲರೂ ಹೆಮ್ಮೆ ಮತ್ತು ಅಭಿಮಾನಗಳಿಂದ ಆಚರಿಸುತ್ತಾರೆ. ತಮ್ಮ ಧರ್ಮ, ಜಾತಿ, ಪ್ರದೇಶ ಮತ್ತು ಮಾತೃಭಾಷೆಯನ್ನು ಮರೆತು ಎಲ್ಲರೂ ಕನ್ನಡವೆಂಬ ಬಾವುಟದಡಿಯಲ್ಲಿ ಕರ್ನಾಟಕವೆಂಬ ಸುಂದರ ನಾಡನ್ನು ಪ್ರತಿಬಿಂಬಿಸುತ್ತಾರೆ. ಆಲೂರು ವೆಂಕಟರಾಯರು ಕಂಡ ಕರ್ನಾಟಕದ ಏಕೀಕರಣದ ಕನಸು ನನಸಾಗಿ ವರುಷಗಳುರುಳಿದರೂ ನಮ್ಮ ನಾಡು ಒಂದಾಗಿಯೇ ಇದೆ. ಎಲ್ಲಾ ಭಿನ್ನತೆಯ ಹಿನ್ನಲೆಯನ್ನು ಬದಿಗಿಟ್ಟು ನಾವೆಲ್ಲರೂ ಒಂದೇ ಕರ್ನಾಟಕದ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿಗೆ ದುಡಿಯುವುದೇ ಕರ್ನಾಟಕ ರಾಜ್ಯೋತ್ಸವದ ಹಿರಿಮೆ. ಇಂತಹ ಅಮೂಲ್ಯವಾದ ಶುಭ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಎಲ್ಲಾ ಸದಸ್ಯರಿಗೆ ಮತ್ತು ಅಭಿಮತದ ಓದುಗರಿಗೆ ರಾಜ್ಯೋತ್ಸವದ ಶುಭಾಶಯಗಳು. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್**, MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19 ನವೆಂಬರ್, 2017ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19 ನವೆಂಬರ್, 2017ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 26 ನವೆಂಬರ್, 2017ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 26 ನವೆಂಬರ್, 2017ರಂದು ಸಾಯಂಕಾಲ 4 ಗಂಟೆಯಿಂದ.



ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 9560653021/ 9560563203, 011-26109615 / 26104818

## ಮುನ್ನೋಟ

ಪ್ರಿಯ ಕನ್ನಡಿಗರಿಗೆ, ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು. ರಾಷ್ಟ್ರದ ರಾಜಧಾನಿಯಲ್ಲಿ ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಾಲೆ, ನಮ್ಮ ಕನ್ನಡಿಗರ ಎರಡು ಕಣ್ಣುಗಳು ಇದ್ದಹಾಗೆ. ಕನ್ನಡ ಶಾಲೆ ಪ್ರಾರಂಭಗೊಂಡಿದ್ದು ದೆಹಲಿ ಕರ್ನಾಟಕ ಸಂಘದಿಂದ. ಶಾಲೆಯಲ್ಲಿ ಕನ್ನಡ ಮಕ್ಕಳು ಹಾಗೂ ಕನ್ನಡೇತರರೂ ಸೇರದಿಂತೆ 1200 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಸರವು ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಈಗ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಈಗ ನಡೆಯುತ್ತಿದೆ. ಇವರೊಂದಿಗೆ ನಾನೂ ಒಬ್ಬ ಕಾರ್ಯಕಾರಿ ಸಮಿತಿ ಸದಸ್ಯ. ಅವರ ಇಚ್ಛೆಯಂತೆ ಸ್ಮಾರ್ಟ್ ಕ್ಲಾಸ್ ಪ್ರಾರಂಭಿಸುವ ಒಂದು ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಕನ್ನಡ ಶಾಲೆಯ ಅಭಿವೃದ್ಧಿಗೆ ಸಹಕಾರ ನೀಡುವಂತೆ ಕೇಳಿದಾಗ ದೆಹಲಿ ಕರ್ನಾಟಕ ಸಂಘವು ಸ್ಮಾರ್ಟ್ ಕ್ಲಾಸ್‌ನ್ನು ಪ್ರಾರಂಭಿಸಲು ಉಪಕರಣಗಳ ಖರೀದಿಗೆ 5,15,819/–ರೂಗಳನ್ನು ನೀಡಿ ಸ್ಮಾರ್ಟ್ ಕ್ಲಾಸ್‌ಗಳನ್ನು ಪ್ರಾರಂಭಿಸಲು ಸಹಕಾರ ನೀಡಿದೆ. ಈ ಹಿಂದೆ ಎಂ.ಸಿ.ಎ.ಯನ್ನು ಪ್ರಾರಂಭಿಸಲು ಸಹ 25ಲಕ್ಷ ರೂಪಾಯಿಗಳ ಸಹಕಾರವನ್ನು ಸಂಘದಿಂದ ನೀಡಲಾಗಿದೆ. ಜೊತೆಗೆ ಈ ಬಾರಿಯ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ 'ಒಗಟಿನ ರಾಣಿ' ಕನ್ನಡ ನಾಟಕವನ್ನು ಕನ್ನಡದ ಮತ್ತು ಕನ್ನಡೇತರ ಮಕ್ಕಳಿಗೆ ರಾಮಕೃಷ್ಣ ಬೆಳ್ತೂರು ಅವರ ನಿರ್ದೇಶನದಲ್ಲಿ ಮಾಡಿಸಲು ಸಂಘದಿಂದ ಸಹಕಾರ ಕೊಡುವಂತೆ ಸರವು ಕೃಷ್ಣ ಭಟ್ಟರು ವಿನಂತಿಸಿಕೊಂಡಿದ್ದರು. ಅವರ ವಿನಂತಿಗೆ ಸ್ಪಂದಿಸಿ ನಾಟಕಕ್ಕೆ ತರಬೇತಿ ನೀಡಲು ಕರ್ನಾಟಕದಿಂದ ಬಂದ ಕಲಾವಿದರಿಗೆ 20 ದಿನ ಊಟ ಮತ್ತು ವಸತಿಯನ್ನು ಸಂಘದಿಂದ ಉಚಿತವಾಗಿ ನೀಡಿರುತ್ತೇವೆ. ಮುಂದೆಯೂ ಸಹ ಶಾಲೆಯ ಅಭಿವೃದ್ಧಿಗೆ ಹೆಗಲಿಗೆ ಹೆಗಲನ್ನು ಕೊಟ್ಟು ಸಹಕರಿಸುತ್ತೇವೆ. ಶಾಲೆಗೆ ಸರಿಯಾದ ಪ್ರಾಂಶುಪಾಲರು ಮತ್ತು ಉಪ ಪ್ರಾಂಶುಪಾಲರನ್ನು ನೇಮಕ ಮಾಡುವ ಜಬಾಬ್ದಾರಿ ಇದೆ. ಈ ಹುದ್ದೆಗಳಿಗೆ ಕನ್ನಡಿಗರೇ ನೇಮಕವಾಗಬೇಕೆಂಬುದು ಎಂಬುದು ನಮ್ಮೆಲ್ಲರ ಅಭಿಲಾಷೆ.

ಜನಕಪುರಿ ಮಹಿಳಾ ಮಂಡಳಿಯ 25ನೇ ವರ್ಷದ ಬೆಳ್ಳಿ ಹಬ್ಬದ ಆಚರಣೆಗೆ ಮಹಿಳಾ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಜಯಶ್ರೀ ಬಸವರಾಜು ಹಾಗೂ ಕಾರ್ಯದರ್ಶಿ ಶ್ರೀಮತಿ ಸವಿತಾ ನೆಲ್ಲಿ ಅವರು ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಸಂಘದಿಂದ ಸಹಕಾರವನ್ನು ಕೋರಿ ಕಾರ್ಯಕಾರಿ ಸಮಿತಿಗೆ ವಿನಂತಿಸಿದ್ದರು. ಸಂಪೂರ್ಣ ಸಹಕಾರ ನೀಡಿ ಕಾರ್ಯಕ್ರಮವನ್ನು ಯಶಸ್ವಿಗೊಳಸಿಲಾಗಿದೆ. ಶ್ರಮಿಸಿದ ಎಲ್ಲಾ ಪದಾಧಿಕಾರಿಗಳಿಗೆ ಅಭಿನಂದನೆಗಳು. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**2017 ನವೆಂಬರ್ 19** ಭಾನುವಾರ ಅಪರಾಹ್ನ 4.00 ಗಂಟೆಗೆ

'ಅಂತರಾಳ' ಬೆಂಗಳೂರು ಅರ್ಪಿಸುವ




ಕರ್ನಾಟಕ ರಾಜ್ಯೋತ್ಸವ ಸಂದರ್ಭ ಕನ್ನಡದ ಖ್ಯಾತ ಗಾಯಕರುಗಳಾದ ರಾಮಚಂದ್ರ ಹಡಪದ್ ಮತ್ತು ಶ್ವೇತಾ ಪ್ರಭು ಅವರಿಂದ ಡಾ. ದೊಡ್ಡರಂಗೇಗೌಡರ ಜನಪ್ರಿಯ ಹಾಡುಗಳ **'ಕನ್ನಡದ ಹಬ್ಬ'.**

**ಕೃತಿ ಬಿಡುಗಡೆ :** ಡಾ. ದೊಡ್ಡರಂಗೇಗೌಡ ಅವರ 'ನೆಲ ಜಲದ ನಾದ'–ಕವನ ಸಂಕಲನ, ದೆಹಲಿ ಕರ್ನಾಟಕ ಸಂಘ ಪ್ರಕಟಿತ 'ನಿರಂಜನ ಕೃತಿ ಸ್ಮೃತಿ–ನಿರಂಜನ ನೀಲಾಂಜನ ಮತ್ತು ಡಾ. ಅಹಲ್ಯಾಚಿಂತಾಮಣಿ ಅವರ 'ಅಕವಿತೆ' ಕವನ ಸಂಕಲನ ಬಿಡುಗಡೆ

**2017 ನವೆಂಬರ್ 26** ಭಾನುವಾರ ಅಪರಾಹ್ನ 2.00 ಗಂಟೆಗೆ

ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ ಮತ್ತು ಜಾನಪದ ವೈವಿಧ್ಯಮಯ ಸಮೂಹ ನೃತ್ಯ ಮತ್ತು ಸಮೂಹಗಾನ ಕಾರ್ಯಕ್ರಮಗಳು

## ಸಂಘದಲ್ಲಿ ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮ

**2017 ನವೆಂಬರ್ 11** ಶನಿವಾರ ಸಂಜೆ : 4.00 ಗಂಟೆಗೆ

ನಾಡಪ್ರಭು ಕೆಂಪೇಗೌಡ ಫೌಂಡೇಶನ್ ವತಿಯಿಂದ–
**'ಪ್ರತಿಭಾ ಪುರಸ್ಕಾರ', ವಿದ್ಯಾರ್ಥಿ ವೇತನ ವಿತರಣೆ, ಸನ್ಮಾನ್ಯ ಶ್ರೀ ಎಚ್.ಎಂ. ರೇವಣ್ಣ ಅವರಿಗೆ–ಅಭಿನಂದನೆ.**
ಬೆಂಗಳೂರಿನ ಹೆಸರಾಂತ ಚಾಮರಾಜ ಫಿಲಮ್ಸ್ ಇನ್ಸಿಟ್ಯೂಟ್ ತಂಡದಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು

**2017 ನವೆಂಬರ್ 12** ಭಾನುವಾರ ಮಧ್ಯಾಹ್ನ : 12.00 ಗಂಟೆಗೆ

ಬಂಟ್ಸ್ ಕಲ್ಚರಲ್ ಅಸೋಸಿಯೇಶನ್ (ರಿ) ನವದೆಹಲಿಯ ವಾರ್ಷಿಕ ಸರ್ವ ಸದಸ್ಯರ ಸಭೆ ಹಾಗೂ ಸ್ಥಳೀಯ ಕಲಾವಿದರುಗಳಾದ ಅಶೋಕ್ ಕುಂಬಾರ್, ಶ್ರೇಯಸ್ ಜೋಗಿ ಮತ್ತು ಅರವಿಂದ ಬಿಜೈ ಅವರಿಂದ **ಸಂಗೀತ ಲಹರಿ**

## ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಆಟೋಟ ಸ್ಪರ್ಧೆ

ದೆಹಲಿ ಕರ್ನಾಟಕ ಸಂಘವು 2017–18ನೇ ಸಾಲಿನ ವಿವಿಧ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ವಾರ್ಷಿಕೋತ್ಸವದ ಅಂಗವಾಗಿ ಡಿಸೆಂಬರ್ 3 ಮತ್ತು 9ರಂದು ಆಯೋಜಿಸಲು ನಿರ್ಧರಿಸಿದೆ. ಸಂಘದ ಸದಸ್ಯರು ಮತ್ತು ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ. ವಿವರವನ್ನು ಅಂಚೆ / ಇಮೇಲ್ ಮೂಲಕ ಕಳುಹಿಸಲಾಗುವುದು.
ಹೆಚ್ಚಿನ ಮಾಹಿತಿಗಾಗಿ ಸಂಘದ ಕಛೇರಿಯನ್ನು ಸಂಪರ್ಕಿಸಬೇಕಾಗಿ ವಿನಂತಿ. 011–26109615 / 26104818
9560653021/ 9560563203

*ಪ್ರಧಾನ ಕಾರ್ಯದರ್ಶಿ*

ಅಭಿಮತ ಪ್ರಧಾನ ಸಂಪಾದಕರು
ಬಾಲಕೃಷ್ಣ ನಾಯ್ಕ್ ಡಿ.

ಅಭಿಮತ ಸಂಪಾದಕ ಮಂಡಳಿ
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 28 ಸಂಚಿಕೆ 2
ನವೆಂಬರ್ 2017

ಅಭಿಮತ

## ಸಂಪಾದಕರ ಟಿಪ್ಪಣಿಗಳು

# ಶಾಲೆಗಳಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯವಾಗಿ ಕಲಿಸಬೇಕಾಗಿದೆ

ಒಂದು ಭೌಗೋಲಿಕ ಪ್ರದೇಶದ ಪರಂಪರೆ ಮತ್ತು ಸಂಸ್ಕೃತಿಯ ಉಳಿವು ಮತ್ತು ಬೆಳವಣಿಗೆಯಲ್ಲಿ ಆ ಪರಿಸರದ ಭಾಷೆಯು ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದು ಕರ್ನಾಟಕದ ವಿಚಾರದಲ್ಲಿಯೂ ಇದು ನಿಜವಾಗಿದೆ. ಕರ್ನಾಟಕವು ವೈವಿಧ್ಯಮಯವಾದ ಹಲವು ಚಿಂತನೆಗಳನ್ನು ತನ್ನೊಳಗೆ ಬೆಳೆಸಿಕೊಂಡ ಸಮೃದ್ಧ ಸಂಸ್ಕೃತಿಯನ್ನು ಹೊಂದಿದೆ. ಶತಮಾನಗಳಿಂದ ಹತ್ತು ಹಲವು ಸಂಸ್ಕೃತಿಗಳನ್ನು ತನ್ನೊಡಲೊಳಗೆ ತೆಗೆದುಕೊಂಡಿರುವ ಕರ್ನಾಟಕದ ಸಂಸ್ಕೃತಿಯು ಅನುಪಮವಾದುದು ಮಾತ್ರವಲ್ಲ ಸದಾ ಚಿರಂತನವಾಗಿಯು ಇದೆ. ನಾವು ಬಳುವಳಿಯಾಗಿ ಪಡೆದುಕೊಂಡ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದಿನ ದಿನಗಳಲ್ಲಿ ಹೇಗೆ ಬೆಳೆಸಬಹುದು ಎಂಬ ಚಿಂತನೆಯನ್ನು ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ಮಾಡುವುದು ಅಗತ್ಯವಾಗಿದೆ. ಭಾರತದ ಇತರ ರಾಜ್ಯಗಳಾದ ಕೇರಳ, ಪಶ್ಚಿಮ ಬಂಗಾಳ, ರಾಜಸ್ಥಾನಗಳು ಕೂಡಾ 1956ರ ನವಂಬರ್ ಒಂದರಂದು ಅಸ್ತಿತ್ವಕ್ಕೆ ಬಂದರೂ ಕರ್ನಾಟಕದಲ್ಲಿ ನಡೆಯುವ ರಾಜ್ಯೋತ್ಸವದ ಸಂಭ್ರಮ ಇನ್ನೆಲ್ಲೂ ಕಾಣಸಿಗದು. ಈ ಸಂಭ್ರಮವು ನಮ್ಮ ಸಂಸ್ಕೃತಿಯನ್ನು ಬಿಂಬಿಸಲು ಇರುವ ಒಂದು ಮುಖ್ಯ ಉತ್ಸವವಾಗಿರುವಂತೆ ಸಂಸ್ಕೃತಿಯ ಕುರಿತು ಗಂಭೀರ ಚಿಂತನೆಗಳನ್ನು ಮಾಡುವ ಸಂದರ್ಭವೂ ಆಗಬೇಕಾಗಿದೆ. ಕನ್ನಡ ಭಾಷೆಯ ಉಳಿವು ಮತ್ತು ಬೆಳವಣಿಗೆಯಿಂದಲೇ ನಮ್ಮ ಶ್ರೀಮಂತವಾದ ಕರ್ನಾಟಕದ ಸಂಸ್ಕೃತಿಯ ಉಳಿವು ಸಾಧ್ಯವಾಗುತ್ತದೆ. ಭಾಷೆಯನ್ನು ಉಳಿಸುವುದು ಮತ್ತು ಬೆಳೆಸುವುದಕ್ಕೆ ಮುಖ್ಯವಾಗಿ ನಾವು ಕನ್ನಡದಲ್ಲಿಯೇ ಮಾತಾಡಬೇಕು, ಓದಬೇಕು ಮತ್ತು ಬರೆಯಬೇಕು. ಯಾವುದೇ ಕೀಳರಿಮೆಯಿಲ್ಲದೇ ನಾವು ಕನ್ನಡದಲ್ಲಿಯೆ ವ್ಯವಹರಿಸುವ ಕುರಿತು ಚಿಂತಿಸಬೇಕು. ಒಬ್ಬರಿಂದೊಬ್ಬರು ವ್ಯವಹರಿಸುವಾಗ ನಮ್ಮ ಸಂಸ್ಕೃತಿಯನ್ನು ಬಿಂಬಿಸುವುದು ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ದೇಶದ ಬಹುತೇಕ ಕಡೆ ಜನರು ತಮ್ಮ ಭಾಷೆಯಲ್ಲಿಯೇ ವ್ಯವಹರಿಸುತ್ತಾರೆ ಆದರೆ ನಗರಗಳು ಬೆಳೆದಂತೆ ಅಲ್ಲಿ ಬೇರೆ ಬೇರೆ ಭಾಷೆಯ ಮತ್ತು ಸಂಸ್ಕೃತಿಯ ಜನರು ಬಂದು ನೆಲೆಗೊಳ್ಳುತ್ತಾರೆ. ಇಂತಹ ಸಂದರ್ಭಗಳಲ್ಲಿಯೂ ನಾವು ನಮ್ಮದೇ ಭಾಷೆಯನ್ನು ಉಪಯೋಗಿಸಬೇಕು.

ಭಾಷೆಯ ಉಳಿವು ಬೆಳವಣಿಗೆಗೆ ಮುಖ್ಯವಾಗಿ ಶಿಕ್ಷಣವನ್ನು ನಮ್ಮ ಮಾತೃಭಾಷೆಯಲ್ಲಿಯೇ ಪಡೆಯುವುದು ಮುಖ್ಯವಾಗುತ್ತದೆ. ಇಂಗ್ಲೀಷ್ ಭಾಷೆ ಜಗತ್ತಿನಾದ್ಯಂತ ಹೆಚ್ಚು ಪ್ರಚಲಿತವಿರುವುದರಿಂದ ನಮ್ಮ ಸಾಮಾಜಿಕ ಬದುಕಿನಲ್ಲಿ ಅದು ಹೆಚ್ಚು ಪ್ರಭಾವಶಾಲಿಯಾಗಿ ಬೆಳೆಯುತ್ತಿದೆ. ಉನ್ನತ ಶಿಕ್ಷಣ ಮತ್ತು ಉದ್ಯೋಗದ ಅವಕಾಶಗಳು ಮತ್ತು ಹೆಚ್ಚುತ್ತಿರುವ ವಲಸೆಗಳಿಂದಾಗಿ ಇಂಗ್ಲೀಷ್ ಮಾಧ್ಯಮದ ಶಿಕ್ಷಣ ಹೆಚ್ಚು ಜನಪ್ರಿಯವಾಗಿದೆ. ಈ ನಿಟ್ಟಿನಲ್ಲಿ ನಾವು ಬಹಳಷ್ಟು ಮುಂದೆ ಬಂದಿದ್ದೇವೆ. ಇನ್ನು ನಮ್ಮ ಶಿಕ್ಷಣ ಮಾಧ್ಯಮವನ್ನು ಬದಲಿಸುವ ಕಡಿಮೆಯಿರುವುದರಿಂದ ಹೆಚ್ಚು ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ಓದುವಂತೆ ಮಾಡುವ ಹೊಸ ಯೋಜನೆಗಳನ್ನು ನಾವು ಹಾಕಬೇಕಾಗಿದೆ. ತಮ್ಮ ಮಾತೃಭಾಷೆಯಲ್ಲಿಯೇ ಮಕ್ಕಳು ಶಿಕ್ಷಣ ಪಡೆದಾಗ ವಿಷಯಗಳನ್ನು ಹೆಚ್ಚು ಅರ್ಥ ಮಾಡಿಕೊಂಡು, ತಾವು ಓದುವ ವಿಚಾರಗಳು ಬದುಕಿನಲ್ಲಿ ಯಾವ ರೀತಿ ಅನ್ವಯವಾಗುತ್ತದೆ ಎನ್ನುವುದನ್ನು ಬೇಗನೇ ತಿಳಿಯುತ್ತಾರೆ. ಅವರು ಯೋಚಿಸುವ ರೀತಿಯೂ ಭಿನ್ನವಾಗಿ ಹೊಸ ಜ್ಞಾನ ಸಂಪತ್ತನ್ನು ಹುಟ್ಟು ಹಾಕುತ್ತಾರೆ. ಜಗತ್ತಿನ ನಲ್ವತ್ತು ಶೇಕಡಾ ಜನರಿಗೆ ತಮ್ಮ ಭಾಷೆಯಲ್ಲಿಯೇ ಕಲಿಯುವ ಅವಕಾಶಗಳು ಲಭಿಸುವುದಿಲ್ಲ. ಯಾಕೆಂದರೆ ಆ ಭಾಷೆಗಳನ್ನು ಆಡುವ ಜನರ ಸಂಖ್ಯೆ ಕಡಿಮೆಯಿರುತ್ತದೆ ಮತ್ತು ಅವರು ಇರುವ ಪ್ರದೇಶದಲ್ಲಿ ಇನ್ನೊಂದು ಭಾಷೆಯೇ ಪ್ರಬಲವಾಗಿದ್ದು ಅದರಲ್ಲೇ ಶಿಕ್ಷಣವು ನಡೆಯುತ್ತದೆ. ಇಂತಹ ಸಮಸ್ಯೆಗಳಿರುವಲ್ಲಿ ನಾವು ಕನಿಷ್ಟ ದ್ವಿಭಾಷಾ ನೀತಿಯನ್ನು ಅನುಸರಿಸಬೇಕು. ಕರ್ನಾಟಕದಲ್ಲಿಯೂ ಕನ್ನಡ ಮಾಧ್ಯಮ ಶಿಕ್ಷಣವು ಕ್ಷೀಣಿಸುವ ಪರಿಸ್ಥಿತಿಯಲ್ಲಿರುವಾಗ ಇಂಗ್ಲೀಷ್ ಮಾಧ್ಯಮದ ಶಾಲೆಗಳಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯವಾಗಿ ಕಲಿಸುವಂತಾಗಬೇಕಾಗಿದೆ. ಕನ್ನಡ ಭಾಷೆಯ ಕುರಿತು ಚಿಂತನೆ ಮಾಡಿ ಅದರ ಬೆಳವಣಿಗೆಯ ಕುರಿತು ಹೆಚ್ಚು ಕಾರ್ಯಕ್ರಮಗಳನ್ನು ನಾವು ರಾಜ್ಯೋತ್ಸವದ ಸಂದರ್ಭದಲ್ಲಿ ಮಾಡಬೇಕಾಗಿದೆ.

ದೆಹಲಿಯ ಕನ್ನಡಿಗರು ನವಂಬರ್ ತಿಂಗಳಿಡೀ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ದೇಶದ ರಾಜಧಾನಿಯಲ್ಲಿ ಕನ್ನಡದ ಕಲರವವನ್ನು ಮಾಡುತ್ತಿರುವುದು ಪ್ರಶಂಸನೀಯ. ಈ ಸಂಚಿಕೆ ಮತ್ತು ಮುಂದಿನ ತಿಂಗಳ ಸಂಚಿಕೆಗಳಲ್ಲಿ ಇಂತಹ ಕಾರ್ಯಕ್ರಮಗಳ ವರದಿಗಳನ್ನು ಓದಬಹುದು.

ಅಭಿಮತದ ಲೇಖಕರಿಗೆ ಮತ್ತು ಓದುಗರಿಗೆ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ಅ

*ಬಾಲಕೃಷ್ಣ ನಾಯ್ಕ್ ಡಿ.*



# ಕರ್ನಾಟಕ ರಾಜ್ಯೋತ್ಸವಕ್ಕೆ ಚಾಲನೆ

ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿನ ನಂದಿಯನ್ನು ಸಾಕ್ಷಿಯಾಗಿಟ್ಟುಕೊಂಡು ಧ್ವಜ ಸ್ಥಂಭ ಸ್ಥಾಪಿಸಿ ರಾಷ್ಟ್ರಧ್ವಜ ಹಾರಿಸಿ, ನಮಿಸಿ, ರಾಷ್ಟ್ರಗೀತೆ ಹಾಗೂ "ಜಯಭಾರತ ಜನನಿಯ ತನುಜಾತೆ" ನಾಡಗೀತೆಯನ್ನು ಹಾಡುವುದರೊಂದಿಗೆ ದೆಹಲಿಯಲ್ಲಿ 62ನೇ ಕರ್ನಾಟಕ ರಾಜ್ಯೋತ್ಸವಕ್ಕೆ ಚಾಲನೆ ನೀಡಲಾಯಿತು.

ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತಾ ಮಹದೇವ, ರಾಷ್ಟ್ರದ ಧ್ವಜಾರೋಹಣ ಮಾಡಿ ಸಮಸ್ತ ಕನ್ನಡಿಗರಿಗೆ ರಾಜ್ಯೋತ್ಸವದ ಶುಭಾಶಯವನ್ನು ಕೋರಿದರು. ಈ ಸಂದರ್ಭದಲ್ಲಿ ಕಲಾವಿದ ಶ್ರೀ ಚೆನ್ನು ಎಸ್. ಮಠದ, ಕರ್ನಾಟಕ ಬ್ಯಾಂಕಿನ ಹಿರಿಯ ಪ್ರಬಂಧಕ ಶ್ರೀ ಲಕ್ಷ್ಮೀನಾರಾಯಣ ರಾವ್, ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಖಜಾಂಚಿ ಶ್ರೀ ಕೆ.ಎಸ್.ಜಿ. ಶೆಟ್ಟಿ, ಜಂಟಿ ಕಾರ್ಯದರ್ಶಿ ಶ್ರೀಮತಿ ಜಮುನಾ ಸಿ. ಮಠದ, ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಡಾ. ಎಂ.ಎಸ್. ಶಶಿಕುಮಾರ್, ಶ್ರೀ ರಾಧಾಕೃಷ್ಣ, ಶ್ರೀಮತಿ ಸುನಿತಾ ಮುರಗೋಡ, ಶ್ರೀ ತ್ಯಾಗೇಶ್ ಮೂರ್ತಿ ಮತ್ತು ಹಲವಾರು ಸಂಘದ ಸದಸ್ಯರು ಪಾಲ್ಗೊಂಡಿದ್ದರು. ಸುಗಂಧ ಪುಷ್ಪ, ಫಲ, ಮಾಲಾಂಕೃತಿಗಳಿಂದ ಸಿಂಗರಿಸಿದ 1952ರಲ್ಲಿ ಮೊದಲ ಬಾರಿಗೆ ಪೂಜಿಸಿದ ಭುವನೇಶ್ವರಿಯ ತೈಲವರ್ಣ ಚಿತ್ರದ ಪ್ರತಿಕೃತಿ ಪೂಜಿಸಿ, ನಮಿಸಿ ನಾಡಗೀತೆ ಹಾಡಿದರು. ಅ

***ಚೆನ್ನು ಎಸ್. ಮಠದ***



# ವರ್ಣ ವೈಭವ ಚಿತ್ರಕಲಾ ಪ್ರದರ್ಶನ

ಬೆಂಗಳೂರಿನ ಕಲಾವಿದರಾದ ಸುಮಿತ್ರ ಮತ್ತು ಶಾಂತಲ ಎಚ್.ಪಿ. ಅವರ 'ವರ್ಣ ವೈಭವ' ಎಂಬ ಚಿತ್ರಕಲಾ ಪ್ರದರ್ಶನವನ್ನು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಇದೇ ಅಕ್ಟೋಬರ್ 8ರಂದು ದೆಹಲಿಯ ಹಿರಿಯ ಕಲಾವಿದರಾದ ಶ್ರೀ ಭೀಮರಾವ್ ಮುರಗೋಡ ಅವರು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸರವು ಕೃಷ್ಣ ಭಟ್, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಉಪಸ್ಥಿತರಿದ್ದರು. ಅ

***ಅಭಿಮತ ವರದಿ***




# ಸಂಘದಿಂದ ದೆಹಲಿ ಕನ್ನಡ ಶಾಲೆಗೆ ಸ್ಮಾರ್ಟ್ ಕ್ಲಾಸ್ ಉಪಕರಣಗಳ ಕೊಡುಗೆ

ದೆಹಲಿ ಕರ್ನಾಟಕ ಸಂಘವೇ ಸ್ಥಾಪಿಸಿರುವ ಕನ್ನಡ ಶಾಲೆಯ ಬೆಳವಣಿಗೆಗಾಗಿ ಕನ್ನಡ ಮಕ್ಕಳ ಉಪಯೋಗದ ದೃಷ್ಟಿಯಿಟ್ಟುಕೊಂಡು ಮೊಟ್ಟ ಮೊದಲಿಗೆ ಕನ್ನಡ ಶಾಲೆಯಲ್ಲಿ ಸ್ಮಾರ್ಟ್ ಕ್ಲಾಸ್‌ಗಳನ್ನು ಪ್ರಾರಂಭಿಸಲು ಐದು ಲಕ್ಷ ರೂಪಾಯಿಗಳ ಉಪಕರಣಗಳನ್ನು ಕೊಡುಗೆಯಾಗಿ ಸಂಘದಲ್ಲಿ ನಡೆದ ಸಮಾರಂಭವೊಂದರಲ್ಲಿ ಇದೇ ಅಕ್ಟೋಬರ್ 12ರಂದು ನೀಡಲಾಯಿತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಡಾ. ಪುರುಷೋತ್ತಮ ಬಿಳಿಮಲೆ, ಕನ್ನಡ ಶಾಲೆಯ ಬೆಳವಣಿಗೆಗಾಗಿ ಕರ್ನಾಟಕ ಸಂಘ ಒಂದು ಹೊಸ ಹೆಜ್ಜೆ ಇಟ್ಟು ಈ ರೀತಿಯ ಕೆಲಸಗಳನ್ನು ಮಾಡುತ್ತಿರುವುದು ಸಂತಸ ತಂದಿದೆ, ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ದೆಹಲಿ ಕನ್ನಡಿಗರ ಎರಡು ಕಣ್ಣುಗಳಿದ್ದ ಹಾಗೆ, ಪ್ರಜಾಪ್ರಭುತ್ವದ ರೀತಿಯಲ್ಲಿ ಚುನಾವಣೆಗಳು ನಡೆಯುತ್ತವೆ, ಚುನಾವಣೆಯ ನಂತರ ಎರಡೂ ಸಂಸ್ಥೆಗಳು ಒಟ್ಟುಗೂಡಿ ಕೆಲಸ ಮಾಡಿದರೆ ಕನ್ನಡದ ಸ್ವರವನ್ನು ಯಾರೂ ತುಳಿಯಲಿಕ್ಕೆ ಸಾಧ್ಯವಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಿದರು. ಇನ್ನೋರ್ವ ಅತಿಥಿ ಡಾ. ರಂಗನಾಥ ಸಿಂಗಾರಿ ಮಾತನಾಡಿ ಕನ್ನಡ ಶಾಲೆಯ ಅಭಿವೃದ್ಧಿಗೆ ತಮ್ಮ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ಇದು ನಮ್ಮ ಶಾಲೆಗೆ ಒಂದು ಚಿಕ್ಕ ಕೊಡುಗೆ, ಮುಂಬರುವ ದಿನಗಳಲ್ಲಿ ಕನ್ನಡ ಶಾಲೆಯನ್ನು ಒಂದು ಮಾದರಿ ಶಾಲೆಯಾಗಿ ಮಾಡಬೇಕು ಎನ್ನುವುದು ನಮ್ಮೆಲ್ಲರ ಅಭಿಲಾಷೆ ಎಂದು ತಿಳಿಸಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶ್ರೀ ಸರವು ಕೃಷ್ಣ ಭಟ್ ಅವರು ಕೊಡುಗೆಯನ್ನು ಸ್ವೀಕರಿಸಿ ಮಾತನಾಡತ್ತ ಸಂಘದ ಉದ್ದೇಶವನ್ನು ಸ್ವಾಗತಿಸಿ ಶಾಲೆಯ ಬೆಳವಣಿಗೆಗೆ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು ಎಂದು ತಿಳಿಸಿದರು.

ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶ್ರೀ ಸೋಮನಾಥ ಬಿರಾದಾರ ಮಾತನಾಡಿ ಕನ್ನಡ ಶಾಲೆ ಮತ್ತು ದೆಹಲಿ ಕರ್ನಾಟಕ ಸಂಘ ಎರಡೂ ಒಂದೇ ಎಂದು ಹೇಳಿದರು. ಶಿಕ್ಷಣ ಸಂಸ್ಥೆಯ ಮ್ಯಾನೇಜರ್ ಶ್ರೀ ಶಿವಾನಂದ ಸಿರ್ಸಿಕರ್ ಅವರು ಮಾತನಾಡಿ ವಿದ್ಯಾಸಂಸ್ಥೆಯ ಬೆಳವಣಿಗೆಗೆ ಸಂಘದ ಕೊಡುಗೆಯನ್ನು ಶ್ಲಾಘಿಸಿದರು ಅಲ್ಲದೇ ಸಂಘ ಈ ರೀತಿಯ ಸಹಕಾರ ನೀಡುತ್ತಾ ಬಂದರೆ ದೆಹಲಿಯಲ್ಲಿ ಇನ್ನೊಂದು ಕನ್ನಡ ಶಾಲೆಯನ್ನು ಪ್ರಾರಂಭಿಸಬಹುದು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸುಳ್ಯದ ಬಾಳಿಲದ ವಿದ್ಯಾಭೋದಿನಿ ಪೌಢ ಶಾಲೆಯ ಮಕ್ಕಳು ಪ್ರಸ್ತುತಪಡಿಸಿದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಅತ್ಯಂತ ಚೆನ್ನಾಗಿ ಮೂಡಿಬಂತು. ಕಾರ್ಯಕ್ರಮದ ನಿರ್ವಹಣೆಯನ್ನು ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ನಡೆಸಿಕೊಟ್ಟರು. ಅ

*ಅಭಿಮತ ವರದಿ*








# ದೆಹಲಿಯಲ್ಲಿ ಸಂಭ್ರಮದ ಪಟ್ಲ ಯಕ್ಷ ವೈಭವ

ಯಕ್ಷಗಾನ ಕಲೆಯನ್ನು ಉಳಿಸಿ, ಬೆಳೆಸಿಕೊಂಡು ಹೋಗುವುದರ ಜೊತೆಗೆ ಅಶಕ್ತ ಕಲಾವಿದರಿಗೆ ಆರ್ಥಿಕವಾಗಿ ಸ್ಪಂದಿಸಿ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡುತ್ತಿರುವುದು ಹಾಗೂ ಇನ್ನೂ ಅನೇಕ ಜನೋಪಯೋಗಿ ಕಾರ್ಯಕ್ರಮಗಳನ್ನು ಯಕ್ಷಧ್ರುವ ಪಟ್ಲ ಫೌಂಡೇಷನ್ ಮಾಡುತ್ತಿರುವುದು ತುಂಬಾ ಶ್ಲಾಘನೀಯ ಎಂದು ದೆಹಲಿಯಲ್ಲಿ ಯಕ್ಷಧ್ರುವ ಪಟ್ಲ ಫೌಂಡೇಷನ್‌ನ ದೆಹಲಿ ಘಟಕ ಅಕ್ಟೋಬರ್ 15, 2017ರಂದು ಆಯೋಜಿಸಿದ್ದ ಎರಡನೇ ವರ್ಷದ ಯಕ್ಷ ಸಂಭ್ರಮ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ದೆಹಲಿ ಸರ್ಕಾರದ ಐ.ಎ.ಎಸ್. ಅಧಿಕಾರಿ ಹಿರಿಯಡ್ಕ ರಾಜೇಶ್ ಪ್ರಸಾದ್ ಅವರು ನುಡಿದರು.

ಬಾಲ್ಯದಲ್ಲಿ ನಾನು ಈಗಿನ ಬಲಿಪ ಭಾಗವತರ ಅಜ್ಜರ ಭಾಗವತಿಕೆಯನ್ನು ವೀಕ್ಷಿಸಲು ಬಹಳ ಆಸಕ್ತಿಯಿಂದ ಹೋಗುತ್ತಿದ್ದೆ. ಎರಡಾಣೆ ಕೊಟ್ಟು ಕಡ್ಲೆ ತಿನ್ನುತ್ತಾ ಯಕ್ಷಗಾನ ನೋಡುತ್ತಿದ್ದ ದಿನಗಳನ್ನು ಎಂದಿಗೂ ಮರೆಯಲಾರೆ. ಪಟ್ಲ ಸತೀಶ್ ಶೆಟ್ಟಿ ಬಲಿಪ ಭಾಗವತರ ಶಿಷ್ಯ ಎಂಬುದು ತಿಳಿದಾಗ ಸಂತಸವಾಯಿತು. ಕಳೆದ ವರ್ಷ ಪಟ್ಲ ಸತೀಶರ ಭಾಗವತಿಕೆಯನ್ನು ದೆಹಲಿಯಲ್ಲಿ ನೋಡಿದಾಗ ಅಜ್ಜ ಬಲಿಪರು ಮತ್ತೆ ನೆನಪಾದರು. ಈ ಭಾವನಾತ್ಮಕ ಸೆಳೆತ ಯಕ್ಷಧ್ರುವ ಪಟ್ಲ ಫೌಂಡೇಷನ್‌ಗೆ ಕಳೆದ ವರ್ಷ ಒಂದು ಲಕ್ಷ ರೂಪಾಯಿ ದೇಣಿಗೆ ನೀಡುವಂತೆ ಪ್ರೇರೇಪಿಸಿತು ಎಂದು ಅಧ್ಯಕ್ಷತೆ ವಹಿಸಿದ್ದ ಭಾರತ ಸರ್ಕಾರದ ಮಾಜಿ ಅಡಿಶನಲ್ ಸಾಲಿಸಿಟರ್ ಜನರಲ್ ಮತ್ತು ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಕೆ.ಎನ್. ಭಟ್ ಭಾವುಕರಾಗಿ ನುಡಿದರು.

ಸ್ವಾತಂತ್ರ್ಯದ ಬಳಿಕ ಯಕ್ಷಗಾನ ಮೂರು ಸ್ಥಿತ್ಯಂತರಗಳಿಗೆ ಸಾಕ್ಷಿಯಾಯಿತು. ಪಟ್ಲ ಸತೀಶ್ ಶೆಟ್ಟಿ ಮತ್ತು ಯಕ್ಷಧ್ರುವ ಪಟ್ಲ ಫೌಂಡೇಷನ್ ಮೂರನೇ ಸ್ಥಿತ್ಯಂತರದ ಭಾಗವಾಗಿದ್ದು, ಯಕ್ಷಗಾನದಲ್ಲಿ ಹೊಸ ಬದಲಾವಣೆಗೆ ಕಾರಣವಾಗಿದೆ. ಮೊದಲ ಎರಡು ಸ್ಥಿತ್ಯಂತರಗಳಲ್ಲಿ ಕಲಾವಿದರ ಸಂಕಷ್ಟ, ನೋವು, ದುಃಖಗಳ ಬಗ್ಗೆ ಇತರೆ ಕಲಾವಿದರು ಹೆಚ್ಚು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಈಗ ಕಲಾವಿದರ ಬಗ್ಗೆ ಕಲಾವಿದರೇ ಯೋಚಿಸಿ, ಸ್ಪಂದಿಸುತ್ತಿದ್ದಾರೆ. ಇಂಥದ್ದೊಂದು ಹೊಸ ಸಂಪ್ರದಾಯಕ್ಕೆ ಪಟ್ಲ ಸತೀಶ್ ಶೆಟ್ಟರು ನಾಂದಿ ಹಾಡಿದ್ದಾರೆ ಎಂದು ಜಾನಪದ ವಿದ್ವಾಂಸ, ಜೆಎನ್‌ಯು ಕನ್ನಡ ಭಾಷಾಪೀಠದ ಪ್ರೊಫೆಸರ್ ಡಾ. ಪುರುಷೋತ್ತಮ ಬಿಳಿಮಲೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ದೆಹಲಿ ಕನ್ನಡ ವಿದ್ಯಾಸಂಸ್ಥೆಯ ಅಧ್ಯಕ್ಷ ಸರವು ಕೃಷ್ಣಭಟ್ ಅವರು ಮಾತನಾಡಿ ಪಟ್ಲ ಸತೀಶ್ ಭಾಗವತ ಮಾತ್ರ ಅಲ್ಲ. ಅವರೊಬ್ಬ ಭಾವಜೀವಿ ಕೂಡ. ಅಮೆರಿಕದಲ್ಲಿ ಯಕ್ಷಗಾನ ಪ್ರವಾಸದಲ್ಲಿದ್ದಾಗ ಅವರ ಜೀವನ ಕ್ರಮವನ್ನು ಹತ್ತಿರದಿಂದ ನೋಡಿದ್ದೆ. ಬೆಳಗ್ಗೆ ಎದ್ದು ಯೋಗಾಭ್ಯಾಸ. ನಂತರ ದಿನಪೂರ್ತಿ ಕರ್ಮಯೋಗಿಯಂತೆ ದುಡಿಯುತ್ತಾರೆ. ಈ ನಿಷ್ಠೆ, ಬದ್ಧತೆಯೇ ಅವರ ಯಶಸ್ಸಿಗೆ ಕಾರಣ ಎಂದು ನನಗನಿಸುತ್ತದೆ ಎಂದರು.

ದೆಹಲಿ ಪೊಲೀಸ್‌ನ ಡೆಪ್ಯುಟಿ ಕಮಿಷನರ್ ಬಿ.ಎಲ್. ಸುರೇಶ್ ಅವರು ಕಾರ್ಯಕ್ರಮ ಉದ್ಘಾಟಿಸಿ, ಫೌಂಡೇಷನ್‌ನ ಸಾಧನೆಯನ್ನು ಶ್ಲಾಘಿಸಿ ಶುಭ ಹಾರೈಸಿದರು. ಇದೇ ವೇಳೆ ನಾಡಪ್ರಭು ಕೆಂಪೇಗೌಡ ಟ್ರಸ್ಟ್ ದೆಹಲಿ, ನೀಡಿದ ಒಂದು ಲಕ್ಷ ರೂಪಾಯಿ ದೇಣಿಗೆ ಚೆಕ್‌ನ್ನು ಅವರು ಪಟ್ಲ ಸತೀಶ್ ಶೆಟ್ಟರಿಗೆ ಹಸ್ತಾಂತರಿಸಿದರು. ಯಕ್ಷರಂಗದ ಹಿರಿಯರಾದ ಸೀತಾರಾಮ್ ಕುಮಾರ್ ಕಟೀಲ್, ಪದ್ಮನಾಭ ಉಪಾಧ್ಯಾಯ, ಸತ್ಯನಾರಾಯಣ ಪುಣಿಚಿತ್ತಾಯ, ದಿವಾಕರ ರೈ ಸಂಪಾಜೆ ಅವರನ್ನು ಸನ್ಮಾನಿಸಲಾಯಿತು.

ಯಕ್ಷಧ್ರುವ ಫೌಂಡೇಷನ್ ದೆಹಲಿ ಘಟಕದ ಗೌರವ ಅಧ್ಯಕ್ಷರಾದ ಶಿವಪ್ರಸಾದ್ ಶೆಟ್ಟಿ, ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ಸಂಚಾಲಕ ಕಾರ್ತಿಕ್ ರೈ, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಉಪಸ್ಥಿತರಿದ್ದರು. ಯಕ್ಷಧ್ರುವ ಫೌಂಡೇಷನ್ ದೆಹಲಿ ಘಟಕದ ಕಾರ್ಯದರ್ಶಿ ಪೃಥ್ವಿ ಕಾರಿಂಜೆ ಕಾರ್ಯಕ್ರಮ ನಿರ್ವಹಿಸಿದರು. ಇದೇ ಸಂದರ್ಭದಲ್ಲಿ ಯಕ್ಷಧ್ರುವ ಫೌಂಡೇಷನ್ ಕುರಿತು ಒಂದು ಸಾಕ್ಷ್ಯಚಿತ್ರವನ್ನು ಕೂಡಾ ಪ್ರದರ್ಶಿಸಲಾಯಿತು. ಅ

***ಅಭಿಮತ ವರದಿ***





# ಸಂಘದ ಸದಸ್ಯರ ಚಂಡೀಗಢದ ಪ್ರವಾಸ

ಕಳೆದ ವರ್ಷದ ಪ್ರವಾಸ ಹಸ್ತಿನಾಪುರದ ಸವಿನೆನಪುಗಳು ಹಸಿಯಾಗಿರುವಾಗಲೇ ಈ ಬಾರಿಯ ಚಂಡೀಗಢದ ಪ್ರವಾಸ ಕಾರ್ಯಕ್ರಮ ಅಕ್ಟೋಬರ್ 1 ರಂದು ಬಂದೇ ಬಿಟ್ಟಿತು. ಅದು ದೆಹಲಿ ಕರ್ನಾಟಕ ಸಂಘದ ಸುಮಾರು 600 ಮಂದಿ ಸದಸ್ಯರು ಸಹ ಪರಿವಾರ ಸಮೇತರಾಗಿ ಪ್ರವಾಸ ಹೋದ ಸುದಿನವಾಗಿತ್ತು. ಕುರುಕ್ಷೇತ್ರ, ಹರಿದ್ವಾರ, ಋಷಿಕೇಶ, ಮಸ್ಸೂರಿ, ನೈನಿತಾಲ್ ಹೀಗೆ ಹಲವಾರು ಪ್ರವಾಸತಾಣಗಳಿಗೆ ಹೋಗಿಬರುವ ಕುರಿತಾಗಿ ಬಹಳಷ್ಟು ಚರ್ಚೆ ನಡೆಸಿದ ನಂತರ ಅಂತಿಮವಾಗಿ ದೇಶದ ಅತ್ಯುತ್ತಮ ಸುಂದರ ನಗರಗಳಲ್ಲಿ ಒಂದಾದ ಚಂಡೀಗಢ ಕೇಂದ್ರಾಡಳಿತ ಪ್ರದೇಶಕ್ಕೆ ಹೋಗಿ ಬರುವ ನಿರ್ಧಾರ ಮಾಡಲಾಯಿತು. ಬೆಳಿಗ್ಗೆ ನಾಲ್ಕುವರೆ ಗಂಟೆಗೆ ಸಂಘದ ಮುಂಭಾಗದಲ್ಲಿ ಹತ್ತಾರು ಹವಾನಿಯಂತ್ರಿತ ಬಸ್ಸುಗಳು ಬಂದು ಸೇರುವ ಮೊದಲೇ ನೂರಾರು ಮಂದಿ ಕನ್ನಡಿಗರು ಬಂದು ನೆರೆದಿದ್ದರು. ಇಷ್ಟೇ ಅಲ್ಲದೆ ಗುರ್‌ಗಾಂವ್, ನೋಯ್ಡಾ ಹಾಗೂ ಬಿವಾಡಿಯಿಂದ ತಲಾ ಎರಡೆರಡು ಬಸ್ಸುಗಳು ಕನ್ನಡಿಗರ ಸಂಸಾರಗಳನ್ನು ಹೊತ್ತು ಚಂಡೀಗಢದತ್ತ ಪ್ರಯಾಣ ಹೊರಟೇ ಬಿಟ್ಟಿತು. ಪುಟಾಣಿ ಮಕ್ಕಳಿಂದ ಹಿಡಿದು ತೊಂಭತ್ತು ವರ್ಷದ ಅಜ್ಜಿ–ಅಜ್ಜಂದಿರು ನೀಟಾಗಿ ಶೃಂಗಾರ ಮಾಡಿಕೊಂಡು ಹೊರಟ ನವ ಯುವಕ–ಯುವತಿಯರು, ಮಕ್ಕಳು, ಪುರುಷರು ಮತ್ತು ಮಹಿಳೆಯರು ಎಲ್ಲರೂ ಸಂಭ್ರಮದಿಂದ ತಮ್ಮ ತಮ್ಮ ಬಸ್ಸುಗಳಲ್ಲಿ ಹಾಡು, ಸಂಗೀತ, ಒಗಟು, ಅಂತಾಕ್ಷರಿಗಳ ನಡುವೆ ಮಧ್ಯ ದಾರಿಯಲ್ಲಿ ಕುರುಕ್ಷೇತ್ರ ತಲುಪಿದಾಗ ಹೋಟೆಲೊಂದರ ಮುಂದೆ ಎಲ್ಲರೂ ಇಳಿದು ತಮ್ಮ 'ನೇಚರ್‌ಕಾಲ್'ಗಳನ್ನು ಮುಗಿಸಿಕೊಂಡು ಬಿಸಿ ಬಿಸಿ ಟೀ ಕುಡಿದು ಸಮಯ ಉಳಿಸುವ ದೃಷ್ಟಿಯಿಂದ ಬಿಸಿ ಬಿಸಿಯಾದ ಉಪ್ಪಿಟ್ಟು ಮತ್ತು ಚಟ್ಟಂಬಡೆಗಳ ಪ್ಯಾಕೆಟನ್ನು ಹಾಗೂ ಕುಡಿಯುವ ನೀರು, ಜ್ಯೂಸ್, ಚಿಪ್ಸ್, ಬಿಸ್ಕಿಟ್ ಮತ್ತು ಹಣ್ಣು ಹಂಪಲುಗಳಿಂದ ತುಂಬಿದ ಪೊಟ್ಟಣಗಳನ್ನು ಹಿಡಿದುಕೊಂಡು ಮತ್ತೆ ಬಸ್ಸೇರಿ ಚಂಡೀಗಢದತ್ತ ರವಾನಿಸಿದೆವು. ಹದಿಮೂರು ಹವಾನಿಯಂತ್ರಿತ ಬಸ್ಸುಗಳು ಒಂದೆರಡು ಇನ್ನೋವ ಕಾರುಗಳು ಸಾಲಾಗಿ ಹೋಗುತ್ತಿದ್ದರೆ ದೆಹಲಿಯ ಕನ್ನಡಿಗರೆಲ್ಲ ದೆಹಲಿ ಬಿಟ್ಟು ಎಲ್ಲೋ ದೂರದ ಊರಿಗೆ ಹೊರಟಂತೆ ಭಾಸವಾಗುತ್ತಿತ್ತು. ಪ್ರತೀ ಬಸ್ಸುಗಳ ಹಿಂಭಾಗ ಮತ್ತು ಮುಂಭಾಗದಲ್ಲಿ ರಾರಾಜಿಸುತ್ತಿದ್ದ ಕುವೆಂಪು, ದ.ರಾ. ಬೇಂದ್ರೆ, ಡಾ. ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ವಿ.ಕೃ. ಗೋಕಾಕ್, ಪು.ತಿ.ನ., ಪಂಡಿತ್ ಭೀಮಸೇನ ಜೋಷಿ, ಡಿ.ವಿ.ಜಿ., ಪಂಡಿತ್ ಪುಟ್ಟರಾಜ ಗವಾಯಿ ಕರ್ನಾಟಕದ ಮಹಾಪುರುಷರುಗಳ, ಕವಿಪುಂಗವರುಗಳ ಹೆಸರುಗಳನ್ನು ಹೊತ್ತ ಬಣ್ಣ ಬಣ್ಣದ ಪೋಸ್ಟರ್‌ಗಳು ಬಸ್ಸಿನ ಕ್ರಮ ಸಂಖ್ಯೆಯನ್ನು ಸೂಚಿಸುತ್ತಿದ್ದವು. ಸುಮಾರು 300 ಕಿ. ಮೀಟರ್ ಚಲಿಸಿದ ನಂತರ ಹೋಗಿ ಇಳಿದದ್ದು ಪಿಂಜೋರ್ ಗಾರ್ಡನ್ಸ್. ಮೈಸೂರಿನ ಕೆ.ಆರ್.ಎಸ್.ನ ಸೌಂದರ್ಯವನ್ನು ಆನಂದಿಸಿದ ದೆಹಲಿ ಕನ್ನಡಿಗರಿಗೆ ಇದೊಂದು ಬಹುದೊಡ್ಡ ವಿಶೇಷವಾಗಿ ಕಾಣದಿದ್ದರು ಅದನ್ನೇ ಹೋಲುವ 'ಮಿನಿಯೇಚರ್' ಗಾರ್ಡನ್‌ನಲ್ಲಿ ಓಡಾಡಿ ತಮ್ಮ ತಮ್ಮ ಛಾಯಾಚಿತ್ರಗಳನ್ನು ತೆಗೆದುಕೊಂಡು ಆನಂದಿಸಿದೆವು. ತರ ತರದ ಫಲ–ಪುಷ್ಪಗಳ ಗಿಡ–ಮರಗಳನ್ನು ಹೊಂದಿದ್ದ ಈ ಗಾರ್ಡನ್ ದೂರದ ಚಂಡೀಗಢದಲ್ಲಿ ಒಂದು ಸೌಂದರ್ಯ ತಾಣವಾಗಿ ಬ್ರಿಟೀಷರ ಕಾಲದಿಂದ ಬೆಳೆಸಿಕೊಂಡು ಬಂದಿದ್ದಾರೆ.

ಬಂದಿದ್ದ 600ಕ್ಕೂ ಹೆಚ್ಚು ಮಂದಿ ಸದಸ್ಯರನ್ನು ಒಂದೆಡೆ ಸೇರಿಸಿ ಒಂದು ಗ್ರೂಪ್ ಫೋಟೋ ತೆಗೆದುಕೊಳ್ಳುವುದೇ ಒಂದು ದೊಡ್ಡ ಕಾರ್ಯಕ್ರಮವಾಗಿತ್ತು. ಅಂತು ಇಂತೂ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರು ಕೈಜೋಡಿಸಿ ಎಲ್ಲರನ್ನು ಕರೆದು ಒಂದೆಡೆ ಸೇರಿಸಿ ಎಸ್.ಎಂ. ಸನ್ಯಾಸ್ ಅವರ ಕ್ಯಾಮರಾದಲ್ಲಿ ಕೈಸೆರೆ ಹಿಡಿಯುವಲ್ಲಿ ಯಶಸ್ವಿಯಾದರು. ಅಲ್ಲಿಂದ ಹೊರಟ ನಾವೆಲ್ಲರೂ



ಹೋಗಿ ಸೇರಿದ್ದು ಮಧ್ಯಾಹ್ನದ ಭೋಜನ ವ್ಯವಸ್ಥೆ ಆಗಿದ್ದ ಪಿ.ಜಿ.ಐ. ಚಂಡೀಗಢದ ಕಮ್ಯುನಿಟಿ ಸೆಂಟರ್‌ಗೆ ಸಾಕಷ್ಟು ದಣಿದು ಬಂದಿದ್ದ ಎಲ್ಲರಿಗೂ ತೃಪ್ತಿಯಾಗುವಂತಹ ಭಾರಿ ಭೋಜನದ ವ್ಯವಸ್ಥೆ ಚಿತ್ರಾನ್ನ, ಮೊಸರನ್ನ, ಅನ್ನ, ಸಾಂಬಾರ್, ಪಲ್ಯ, ಪಾಪಡ್, ಮಜ್ಜಿಗೆ, ಬಾಲೂಶಾಯಿ ಎಲ್ಲರೂ ತಮ ತಮಗೆ ಬೇಕಾದಷ್ಟು ತೆಗೆದುಕೊಂಡು ಸಂತೋಷದಿಂದ ಊಟ ಮಾಡಿ ಮತ್ತೆ ಮುಂದಿನ ಪ್ರವಾಸಕ್ಕಾಗಿ ರೆಡಿಯಾಗಿ ನಿಂತೆವು. ಮುಂದೆ ಹೋಗಿ ಸೇರಿದ್ದು, ಚಂಡೀಗಢದ ವಿಶ್ವವಿಖ್ಯಾತ 'ರಾಕ್ ಗಾರ್ಡನ್'ಗೆ. ಇಷ್ಟೊಂದು ಜನ ಸಾಲಾಗಿ ನಿಂತು ಟಿಕೆಟ್ ಪಡೆದು ಒಂದೇ ಒಂದು ಸಣ್ಣ ಗೇಟಿನ ಮೂಲಕ ಈ ರಾಕ್ ಗಾರ್ಡನ್ ಅನ್ನು ಪ್ರವೇಶಿಸುವ ಹೊತ್ತಿಗೆ ಸಂಜೆ ಆಗಲೇ ಗಂಟೆ 5.00 ಆಗಿತ್ತು. ರಾಕ್ ಗಾರ್ಡನ್‌ನ ಒಳಗೆ ಹೋದವರಿಗೆ ವಿಸ್ಮಯ ಕಾದಿತ್ತು. ಚಿತ್ರ ವಿಚಿತ್ರವಾದ ಉಪಯೋಗಕ್ಕೆ ಬಾರದ ಹಾಳು–ಮೂಳು ಕಲ್ಲು, ಚಿಪ್ಪುಗಳು, ದಿನಬಳಕೆಯ ವಸ್ತುಗಳು ಹಾಗೂ ಇನ್ನಿತರ ಒಡಕು–ತುಂಡು ತುಂಡಾದ ಸಾಮಾಗ್ರಿಗಳನ್ನು ಜೋಡಿಸಿ ಸುಂದರವಾಗಿ ಮಾಡಿದ ಅನೇಕ ಬೊಂಬೆಗಳು, ಆಕೃತಿಗಳು, ಕೆತ್ತನೆಗಳು, ಆಧುನಿಕ ಶಿಲಾ ಕಲೆಗಳು ಕಣ್ಮಣಗಳಿಗೆ ಸಂತಸ ನೀಡಿದವು. ಎಲ್ಲಿ ನೋಡಿದರಲ್ಲಿ ಅಚ್ಚುಕಟ್ಟಾಗಿ ಜೋಡಿಸಿಟ್ಟ ಈ ಕಲಾಕೃತಿಗಳು ಬರುವ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದ್ದವು. ಭಾರಿ ಗಾತ್ರದ ತೂಗೂಯ್ಯಾಲೆ, ಸಣ್ಣಪುಟ್ಟ ಜಲಪಾತಗಳು, ಕಾರಂಜಿಗಳು, ವಿಶೇಷವಾದ ಗಿಡ–ಮರಗಳು, ತಾಣ–ತಾಣಕ್ಕೆ ಹೋಗಲು ನಿರ್ಮಿಸಿದ ಸುರಂಗದಂತಹ ಮಾರ್ಗಗಳು ನೆರೆದವರನ್ನು ಒಂದು ಮಾಯಾಲೋಕಕ್ಕೆ ಕೊಂಡೊಯ್ಯಿತು.

ಶನಿವಾರವೂ ಸೇರಿದಂತೆ ನಾಲ್ಕು ದಿನಗಳ ಬಾರಿ ವಾರಾಂತ್ಯದ ರಜೆ ಇದ್ದ ಕಾರಣ ರಾಕ್ ಗಾರ್ಡನ್ ಜನ ಜಂಗುಳಿಯಿಂದ ತುಂಬಿ ತುಳುಕುತ್ತಿತ್ತು. ನಾವು 600ಕ್ಕೂ ಹೆಚ್ಚು ಮಂದಿ ಕನ್ನಡಿಗರು ಅಲ್ಲಿಗೆ ಲಗ್ಗೆ ಇಟ್ಟು ಕನ್ನಡದಲ್ಲಿ ಗಲಗಲವೆಂದು ಮಾತನಾಡುತ್ತಿದ್ದಾಗ ಅಲ್ಲಿಗೆ ಬಂದಿದ್ದ ಇತರ ಭಾಷಿಗರಿಗೆ ತಾವೆಲ್ಲೋ ಒಂದು ನೂತನ ಪ್ರದೇಶಕ್ಕೆ ಬಂದೆವೋ ಎಂಬಂತೆ ಭಾಸವಾಯಿತು. ರಾಕ್ ಗಾರ್ಡನ್‌ನ ಆನಂದವನ್ನು ಸವಿದು ನಾವು ಹೋಗಿ ತಲುಪಿದ್ದು ಸುಖ್ನಾ ಸರೋವರದತ್ತ. ಆ ಹೊತ್ತಿಗೆ ಸೂರ್ಯ ಮುಳುಗಿ ಕತ್ತಲೆಯಾಗಿತ್ತು. ಬೆಳದಿಂಗಳು ಹಾಗೂ ವಿದ್ಯುತ್ ದೀಪಗಳ ಬೆಳಕಿನಲ್ಲಿ ಆ ಮಹಾ ಸರೋವರ ಹಾಗೂ ಅಲ್ಲಿ ಓಡಾಡುತ್ತಿದ್ದ ದೊಡ್ಡ ದೊಡ್ಡ ದೋಣಿಗಳನ್ನು ನೋಡಿಕೊಂಡು ಮತ್ತೆ ನಮ್ಮ ರಾತ್ರಿಯ ಭೋಜನಕ್ಕಾಗಿ ಹೋಗಿ ತಲುಪಿದೆವು ಚಂಡೀಗಢ ಪಿ.ಜಿ.ಐ. ಚಂಡೀಗಢದ ಕಮ್ಯುನಿಟಿ ಸೆಂಟರ್‌ಗೆ. ಸಸ್ಯಾಹಾರ ಮತ್ತು ಮಾಂಸಾಹಾರದ ದಾಲ್ ಮಕ್ನಿ, ಅನ್ನ, ಸಾಂಬಾರ್, ಸಲಾಡ್, ಪಾಪಡ್, ಉಪ್ಪಿನಕಾಯಿ, ಮಜ್ಜಿಗೆ, ಪಲ್ಯ, ಕೋಸಂಬರಿ, ಗುಲಾಬ್ ಜಾಮೂನು, ಚಿಕನ್ ಕರಿ ಮತ್ತು ಚಿಕನ್ ಫ್ರೈ ರಾತ್ರಿ ಡಿನ್ನರ್‌ನ ನಂತರ ನಾವೆಲ್ಲ ನಮ್ಮ ನಮ್ಮ ಬಸ್ಸುಗಳನ್ನೇರಿ ದೆಹಲಿಯತ್ತ ಪ್ರಯಾಣ ಬೆಳೆಸಿದೆವು. ಮತ್ತೆ ಅದೇ ಪಿಂಜೋರ್ ಗಾರ್ಡನ್, ರಾಕ್ ಗಾರ್ಡನ್ ಹಾಗೂ ಸುಖ್ನಾ ಲೇಕ್‌ಗಳ ನೆನಪುಗಳನ್ನು ನೆನೆಸುತ್ತಾ ಬೆಳಗ್ಗಿನ ಫಲಾಹಾರ ಹಾಗೂ ಮಧ್ಯಾಹ್ನ ಮತ್ತು ರಾತ್ರಿಯ ಭೋಜನದ ಸವಿಯನ್ನು ಮೆಲುಕುತ್ತಾ ದೆಹಲಿಯ ತಲುಪಿದಾಗ ಬೆಳಗ್ಗಿನ ಜಾವಾ 3.00ಗಂಟೆಯಾಗಿತ್ತು.

ಈ ಸುಮಾರು 24ಗಂಟೆಗಳ, 600 ಕಿ.ಮೀಟರಿಗೂ ಮೀರಿದ ಪಯಣ ಬಸ್ಸಿನಲ್ಲಿ ವಿಹಾರ ಸ್ಥಳಗಳಲ್ಲಿ ಪರಸ್ಪರ ಆಡಿದ ಮಾತುಗಳು ಹಾಡಿದ ಹಾಡುಗಳು, ಗುಣುಗಿದ ಪದಗಳು ಎಲ್ಲವನ್ನು ನೆನಪಿಸುತ್ತಾ 'ಪಯಣ ಸ್ವಲ್ಪ ಜಾಸ್ತಿಯಾಯಿತು, ಅರ್ಧಕ್ಕಿಂತ ಹೆಚ್ಚು ಸಮಯ ಬಸ್ಸಿನಲ್ಲೇ ಕಳೆದೆವು', 'ಮೈಸೂರಿನ ವೃಂದಾವನ ಗಾರ್ಡನ್ ನೋಡಿದ ನಮಗೆ ಪಿಂಜೋರ್ ಗಾರ್ಡನ್ ಅಷ್ಟೊಂದು ಖುಷಿ ಕೊಡಲಿಲ್ಲ' ಇದಕ್ಕೆ ಬದಲಾಗಿ 'ಕುರುಕ್ಷೇತ್ರಕ್ಕೇ ಹೋಗಬಹುದಾಗಿತ್ತೋ ಏನೋ', 'ಏನೇ ಆಗಲಿ ಪಿಕ್‌ನಿಕ್‌ನ ವ್ಯವಸ್ಥೆ, ಬಸ್ಸುಗಳು, ಊಟ–ಉಪಹಾರ ಮತ್ತು ನಮ್ಮನ್ನೆಲ್ಲಾ ನಡೆಸಿಕೊಂಡ ರೀತಿ ಮಾತ್ರ ತುಂಬಾ ಚೆನ್ನಾಗಿತ್ತು' ಹಾಗೂ 'ಇಷ್ಟೊಂದು ಮಂದಿಯನ್ನು ಒಗ್ಗೂಡಿಸಿಕೊಂಡು ಇಷ್ಟು ದೂರ ಪ್ರಯಾಣ ಕರೆದುಕೊಂಡು ಹೋಗಿ ಬರುವುದೇನು ಸಾಮಾನ್ಯದ ಕೆಲಸವೇ' ಹೀಗೆ ಹತ್ತು ಹಲವು ಮಾತುಗಳು ಅಲ್ಲಲ್ಲಿ ಕೇಳಿ ಬರುತ್ತಿದ್ದವು. ಮಕ್ಕಳಿಗೆ, ಮುದುಕರಿಗೆ ಇದು ಸ್ವಲ್ಪ ಆಯಾಸದ ಪ್ರವಾಸ ಎನಿಸಿದರೂ ಯುವಕ–ಯುವತಿಯರಿಗೆ ಇದೊಂದು ಒಳ್ಳೆಯ ಹೊಸ ಅನುಭವ ನೀಡಿತ್ತು. ಚಂಡೀಗಢದಂತಹ ಒಂದು ಪ್ಲಾನ್ಡ್ ಸಿಟಿಯನ್ನು ಮೊದಲ ಬಾರಿಗೆ ನೋಡಿದವರಿಗಂತೂ ಅಲ್ಲಿನ ವಿಶಾಲ ರಸ್ತೆಗಳು ಒಂದೇ ತೆರನಾಗಿ ಕಾಣುವ ಸುಂದರವಾದ ಭವ್ಯ ಕಟ್ಟಡಗಳು, ರಸ್ತೆಯ ಇಕ್ಕೆಲಗಳಲ್ಲಿ ಆಕಾಶದೆತ್ತರಕ್ಕೆ ಬೆಳೆದು ನಿಂತ ಬೃಹತ್ ಹಸಿರು ವೃಕ್ಷಗಳು ಹಾಗೂ ರಸ್ತೆ ನಿಯಮಗಳನ್ನು ಚಾಚು ತಪ್ಪದೆ ಪಾಲಿಸುತ್ತಿರುವ ಸಂಚಾರಿಗಳು ಮತ್ತು ಅದರ ಉಸ್ತುವಾರಿ ನಡೆಸುತಿರುವ ಪೋಲಿಸ್ ಅಧಿಕಾರಿಗಳು ಇವೆಲ್ಲ ನೋಡಲು ಒಂದು ಅದ್ಭುತ ಅನುಭವವೇ ಆಗಿತ್ತು. ಅ

***ಸಖಾರಾಮ ಉಪ್ಪೂರು***






# ಜನಕಪುರಿ ಮಹಿಳಾ ಮಂಡಳಿಯ ಸಂಭ್ರಮದ ಬೆಳ್ಳಿ ಹಬ್ಬದ ಆಚರಣೆ

ಇದು ನಮ್ಮ ಮಹಿಳೆಯರ, ಮಹಿಳೆಯರಿಗೋಸ್ಕರ ಮಹಿಳೆಯರ ಕಾರ್ಯಕ್ರಮ, ಮೊದಲು ಅವರಿಗೆ ಅಭಿನಂದನೆಗಳು. ಕರ್ನಾಟಕ ಸಂಘ ನನಗೆ ತವರು ಮನೆಯ ಹಾಗೆ ಏಕೆಂದರೆ ನಾನು ಮೊದಲು ಐ.ಎ.ಎಸ್. ಮಾಡುತ್ತಿರುವಾಗ ನಾನು ಇಲ್ಲಿಯೇ ಉಳಿದುಕೊಂಡು ಐ.ಎ.ಎಸ್. ಉತ್ತೀರ್ಣಳಾಗಿದ್ದು. ಆದ್ದರಿಂದ ದೆಹಲಿ ಕರ್ನಾಟಕ ಸಂಘದಿಂದ ಯಾವಾಗ ಕರೆಬಂದರೂ ನಾನು ಎಷ್ಟೇ ಕಾರ್ಯನಿರತಳಾಗಿದ್ದರೂ ಕೂಡ ಬಂದೇ ಬರುತ್ತೇನೆ ಎಂದು ತಮ್ಮ ಕೃತಜ್ಞತೆಯನ್ನು ಸಲ್ಲಿಸುತ್ತಾ  ಕನ್ನಡದವರೇ ಆದ ಶ್ರೀಮತಿ ಧನಲಕ್ಷ್ಮೀ, ಐ.ಎ.ಎಸ್. ನಿವಾಸೀ ಆಯುಕ್ತರು, ಉತ್ತರ ಪ್ರದೇಶ ಭವನ, ನವದೆಹಲಿ, ಅವರು ದೆಹಲಿ ಕರ್ನಾಟಕ ಸಂಘದ ಸಹಯೋಗದೊಡನೆ ಅಕ್ಟೋಬರ್ 8ರಂದು ಜನಕಪುರಿ ಮಹಿಳಾ ಮಂಡಳಿಯ ಬೆಳ್ಳಿ ಹಬ್ಬದ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ಜನಕಪುರಿ ಮಹಿಳಾ ಮಂಡಳಿ ಬೆಳ್ಳಿ ಹಬ್ಬ ಆಚರಿಸುತ್ತಿರುವ ಈ ಸಂದರ್ಭದಲ್ಲಿ ಅಂದಿನಿಂದ ಇಂದಿನವರೆಗೆ ಬೆಳೆಸಿಕೊಂಡು ಬಂದಿರುವುದಕ್ಕಾಗಿ ಅದರ ಎಲ್ಲ ಕಾರಣಕರ್ತರನ್ನು ಶ್ಲಾಘಿಸಿದರು.

ಕಾರ್ಯಕ್ರಮದ ಇನ್ನೋರ್ವ ಮುಖ್ಯ ಅತಿಥಿ ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಧರ್ಮಪತ್ನಿ ಶ್ರೀಮತಿ ಸಬೀನಾ, ಅವರು ಮಾತನಾಡುತ್ತಾ ಇಂದು ಮಹಿಳೆಯರು ಎಲ್ಲ ರಂಗದಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಿದ್ದು ಪುರುಷರಿಗೆ ಸರಿಸಮಾನರಾಗಿ ನಿಂತಿದ್ದಾರೆ. ಮಹಿಳಾ ಸಬಲೀಕರಣಕ್ಕೆ ಜನಕಪುರಿ ಕನ್ನಡ ಕೂಟದಂತಹ ಮಹಿಳಾ ಮಂಡಳಿಗಳು ತೊಡಗಿಕೊಂಡಿರುವುದೇ ಸಾಕ್ಷಿಯಾಗಿದೆ ಎಂದು ನುಡಿದರು. ಮಹಿಳೆಯರ ಸಬಲೀಕರಣದಲ್ಲಿ ಸದಾ ತನ್ನನ್ನು ತೊಡಗಿಸಿಕೊಂಡಿರುವ ಕರಕುಶಲತೆ, ಅಡುಗೆ ಹಾಗೂ ಇನ್ನಿತರ ಕನ್ನಡ ನಾಡಿನ ಸಾಂಸ್ಕೃತಿಕ ಆಚರಣೆಗಳನ್ನು ಬೆಂಬಲಿಸುತ್ತಾ ಬಂದಿರುವ ಮಹಿಳಾ ಮಂಡಳಿಯ ಹುಟ್ಟು ಮತ್ತು  ಬೆಳದು ಬಂದ ಕುರಿತಾಗಿ ಮಂಡಳಿಯ ಅಧ್ಯಕ್ಷೆ ಶ್ರೀಮತಿ ಜಯಶ್ರೀ ಬಸವರಾಜು ಅವರು ವಿಸ್ತಾರವಾಗಿ ತಿಳಿಸಿದರು. ಮಹಿಳಾ ಮಂಡಳಿಯ ಕಾರ್ಯದರ್ಶಿ ಶ್ರೀಮತಿ ಸವಿತಾ ನೆಲ್ಲಿ ಮಾತನಾಡಿ ಜನಕಪುರಿ ಮಹಿಳಾ ಮಂಡಳಿಯ ಅಭಿವೃದ್ಧಿಗಾಗಿ ಅನೇಕರು ಶ್ರಮಿಸಿದ್ದಾರೆ ಎಂದು ತಿಳಿಸುತ್ತ ಎಲ್ಲರಿಗೂ ಈ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಕೃತಜ್ಞತೆಯನ್ನು ಸಲ್ಲಿಸಿದರು. ಬೆಳ್ಳಿ ಹಬ್ಬವನ್ನು ಸಂಘದ ಜೊತೆಗೂಡಿ ಆಚರಿಸಲು ನೀಡಿದ ಸಂಘದ ಸಹಕಾರವನ್ನು ತುಂಬು ಹೃದಯದಿಂದ ಸ್ಮರಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘಕ್ಕೆ ಎರಡು ಸಾಂಸ್ಕೃತಿಕ ಕಣ್ಣುಗಳು, ಒಂದು ದೆಹಲಿ ಸ್ನೇಹಾ ಕನ್ನಡ ಲೇಡೀಸ್ ಅಸೋಯೇಷನ್ ಇನ್ನೊಂದು ಜನಕಪುರಿ ಮಹಿಳಾ ಮಂಡಳಿ. ಇಂದು ಜನಕಪುರಿಯ ಮಹಿಳಾ ರತ್ನಗಳು ಕೂಡಿ ಬೆಳ್ಳಿ ಹಬ್ಬವನ್ನು ಆಚರಿಸುತ್ತಿದ್ದಾರೆ. ಸಂಘ ಇಂದು ಆರ್ಥಿಕವಾಗಿ ಸದೃಢವಾಗಿದೆ. ದೆಹಲಿಯ ಇತರ ಕನ್ನಡ ಸಂಘ ಸಂಸ್ಥೆಗಳಿಗೂ ಕೂಡಾ ಸಹಕಾರವನ್ನು ನೀಡಿ ಸ್ಪಂದಿಸುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ ಅವರು ಮಾತನಾಡಿ ಬೆಳ್ಳಿ ಹಬ್ಬದ ಆಚರಣೆಯ ಈ ಸಂದರ್ಭದಲ್ಲಿ ತಮ್ಮ ಶುಭಾಶಯವನ್ನು ಕೋರಿದರು. ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತ ಎಂ. ಅವರು ಕಾರ್ಯಕ್ರಮ ನಿರೂಪಿಸಿದರು ಹಾಗೂ ಜಂಟೀ ಕಾರ್ಯದರ್ಶಿ ಶ್ರೀಮತಿ ಜಮುನಾ ಸಿ.ಮಠದ ಅವರು ಧನ್ಯವಾದಗಳನ್ನು ಅರ್ಪಿಸಿದರು.

ಕಾರ್ಯಕ್ರಮದ ಅಂಗವಾಗಿ ಜನಕಪುರಿ ಕನ್ನಡ ಕೂಟದ ವತಿಯಿಂದ ನಾಟಕ 'ದೇವರು ಎದ್ದು ಬಂದಾಗ' ನಟಿಸಿ ನಿರ್ದೇಶಿಸಿದ್ದು ಡಾ. ಎಸ್. ಎಲ್. ಭಂಡಾರ್‌ಕರ್ ಅವರು. ಈ ನಾಟಕವನ್ನು ರಚಿಸಿದ ಎಚ್.ಎಸ್. ಕುಲಕರ್ಣಿಯವರ ಸ್ಮರಣಾರ್ಥವಾಗಿ ಮೂಡಿ ಬಂದ ನಾಟಕ ಬಹಳ ಶ್ಲಾಘನೀಯವಾಗಿತ್ತು. ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಲ್ನಾಡ್ ಸಹೋದರಿಯರಾದ  ಕನ್ನಡ ಚಿತ್ರರಂಗದ ಪ್ರಖ್ಯಾತ ಹಿನ್ನೆಲೆ ಗಾಯಕಿರಾದ ಮಾನಸ ಹೊಳ್ಳ ಮತ್ತು ಪ್ರಾರ್ಥನ ಕಿರಣ್ ಅವರಿಂದ ಕನ್ನಡದ ವೈವಿಧ್ಯಮಯ ಗೀತೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು.  ಜನಕಪುರಿ ಮಹಿಳಾ ಮಂಡಳಿಯ ಸದಸ್ಯರು ಮತ್ತು ಮಕ್ಕಳು ವೈವಿಧ್ಯಮಯ ಹಾಡು ಮತ್ತು ನೃತ್ಯಗಳನ್ನು ಪ್ರದರ್ಶಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪುಟ್ಟ ವಾಸುಕಿ ದಿಟ್ಟ ನಿಖರ ಹೆಜ್ಜೆಗಳನ್ನಿಡುತ್ತಾ ತನ್ನ ಆಂಗಿಕಾಭಿನಯದಿಂದ ಭರತನಾಟ್ಯವನ್ನು ಮಾಡಿದರೆ, ಸಾಯಿ ಅಮೂರ್ತ್ಯ, ಸಾಯಿ ಅಂಶ್ ಹಾಗೂ ಋತ್ವಿಕ್ ನೆಲ್ಲಿ ತುಳುನಾಡಿನ ವೈಭವವನ್ನು ವರ್ಣಿಸುವ ಹಾಡಿಗೆ ನೃತ್ಯ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಕು. ವೈಷ್ಣವಿ ಬಸವರಾಜ್, ಕು. ನಿತ್ಯ ಹಾಗೂ ನಿಸರ್ಗಕ್ರಮವಾಗಿ ಭರತನಾಟ್ಯವನ್ನು ಮಾಡಿ ನೆರೆದಿದ್ದ ಸಭಿಕರಿಗೆಲ್ಲಾ ತಾಯ್ನಾಡಿನ ವಾತಾವರಣವನ್ನು ಸೃಷ್ಟಿಸಿ ಆಹ್ಲಾದವನ್ನು ಉಂಟು ಮಾಡಿದರು. ಜನಕಪುರಿ ಮಹಿಳಾ ಮಂಡಳಿಯ ಜಯಶ್ರೀ ಬಸವರಾಜು, ಲಾವಣ್ಯ ಬಸವರಾಜ, ನಯನ, ಮೋಹಿನಿ



ರೈ, ಮಾಲಿನಿ ಪ್ರಹ್ಲಾದ, ಪವಿತ್ರಾ ತಮ್ಹಣ್‌ಕರ್, ಹರ್ಷಿತಾ ಆಚಾರ್ಯ, ಸವಿತಾ ಇನಾಮದಾರ ಅವರು 'ಮೂಡುತಿರಲಿ ಹೊಸ ಕೃತಿಗಳು' ಎಂಬ ಕೆ.ಬಿ ಶ್ರೀನಿವಾಸ ಮೂರ್ತಿ ಅವರ ಭಾವಗೀತೆಯನ್ನು ಹಾಡಿದರು ಹಾಗೆಯೇ 'ನಮ್ಮ ಸಂಸಾರ ಆನಂದ ಸಾಗರ' ಚಲನಚಿತ್ರಗೀತೆ, 'ಸ್ವಾಮೀ ನೀನು ಶಾಶ್ವತ ನೀನು' ವಚನಗಳನ್ನು ಸುಶ್ರಾವ್ಯವಾಗಿ ಹಾಡಿದರು. ಭಾಳ ಒಳ್ಳೆಯವರು ನಮ್ಮ ಮಿಸ್ಸು... ಎಂಬ ಬಾಲಗೀತೆಗೆ ಪುಟ್ಟ ಪುಟ್ಟ ಮಕ್ಕಳಾದ ಕು. ಅಶ್ಮಿತ, ಐಶಾನಿ, ಅವನಿ ನೆಲ್ಲಿ, ಅಧೋಕ್ಷಜ ಹಾಗೂ ನಿಟಿಲಾಕ್ಷ ಬಸವರಾಜ, ಮಿಸ್ಸಾಗಿ. ಶಿಕ್ಷಕರಾಗಿ ಮೋಹಿನಿ ರೈ ಅವರು ಸೊಗಸಾಗಿ ಅಭಿನಯಿಸಿದರು. ಗುಮ್ಮಿ ಬಿಯರ್ ಹಾಡಿಗೂ ಇದೇ ಮಕ್ಕಳು ಹೆಜ್ಜೆ ಹಾಕಿದರು. ನಂತರ ಜಲಲ ಜಲಲ ಜಲಧಾರೆ ಎಂಬ ಹಾಡಿಗೆ ಸವಿತಾ ನೆಲ್ಲಿ, ಮಮತಾ ಎಸ್. ಬಾಬು, ಪ್ರೇರಣಾ ವೆಂಕಟೇಶ್, ಹರ್ಷಿತಾ ತಮ್ಮ ಒನಪು ವಯ್ಯಾರದಿಂದ ನಲಿದು ಎಲ್ಲರ ಗಮನ ಸೆಳೆದರು. ಹಾಗೆಯೇ ತಾಯಿ ಎಲ್ಲಮ್ಮ ದೇವಿ ಉಧೋ ಉದೋ ಹಾಡನ್ನು ಸವಿತಾ ಇನಾಮದಾರ ಅವರು ಭಾವಭಕ್ತಿಯಿಂದ ಹಾಡಿದರೆ, 'ನಿನ್ನ ಸವಿ ನೆನಪೆ ಮನದಲ್ಲಿ' ಎಂಬ ಚಲನಚಿತ್ರ ಗೀತೆಯನ್ನು ಜಯಶ್ರೀ ಬಸವರಾಜ ಅವರು ಸುಮಧುರವಾಗಿ ಹಾಡಿದರು. ನಮ್ಮ ಮಹಿಳಾ ಮಂಡಳಿಯ ಕಾರ್ಯಕ್ರಮದ ಉದ್ಘಾಟನೆಯೇ 'ಹಚ್ಚೇವು ಕನ್ನಡದ ದೀಪ' ಡಿ. ಕರ್ಕಿಯರವರ ಸಾಹಿತ್ಯ ಹಾಡಿದವರು ಸಿ. ಅಶ್ವಥ ಈ ಗೀತೆಗೆ ಹಳದಿ ಕೆಂಪು ಬಣ್ಣದ ಸೀರೆಯನ್ನುಟ್ಟು ದೀಪವನ್ನಿಡಿದು ಕನ್ನಡಾಂಬೆಗೆ ಶರಣೆಂದು ನೃತ್ಯ ಮಾಡಿದರು. ಜನಕಪುರಿಯ 12ಜನ ಮಹಿಳಾ ಮಣಿಯರು ಸಹಕರಿಸಿದರು. ಶ್ರೀಮತಿ ಕಲ್ಪನಾ ದೇಶಪಾಂಡೆಯವರು ನೃತ್ಯವನ್ನು ಸಂಯೋಜಿಸಿದ್ದರು. ಮನಸ್ಸಿಗೆ ಆಹ್ಲಾದ ಕರುನಾಡಿನ ಕಂಪನ್ನು ಮನೆ ಮನೆಯ ದೀಪವನ್ನು ಮನ ಮನಗಳಲ್ಲಿ ಹಚ್ಚುವಂತೆ ಮಾಡಿದರು. ಈ ಎಲ್ಲಾ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಸವಿತಾ ಇನಾಮದಾರ, ಲಾವಣ್ಯ ಬಸವರಾಜ ಮತ್ತು ಸವಿತಾ ನೆಲ್ಲಿ ನಿರ್ವಹಿಸಿದರು. ಅ

***ಎಂ.ಎಸ್. ಲಾವಣ್ಯ ಬಸವರಾಜ***
















# ದೆಹಲಿ ಕರ್ನಾಟಕ ಸಂಘದಲ್ಲಿ ಕರ್ನಾಟಕ ಭವನದ ರಾಜ್ಯೋತ್ಸವ

ನವದೆಹಲಿಯ ಕರ್ನಾಟಕ ಭವನದಲ್ಲಿಂದು 62ನೇ ಕರ್ನಾಟಕ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ರಾಜ್ಯ ಸರ್ಕಾರದ ದೆಹಲಿಯ ವಿಶೇಷ ಪ್ರತಿನಿಧಿ ಶ್ರೀ ಸಿ.ಎಸ್.ನಾಡಗೌಡ (ಅಪ್ಪಾಜಿ) ಅವರು ಧ್ವಜಾರೋಹಣ ನೆರವೇರಿಸಿ, ತಾಯಿ ಭುವನೇಶ್ವರಿ ದೇವಿಗೆ ಪೂಜೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ರಾಜ್ಯ ಸರ್ಕಾರದ ನವದೆಹಲಿಯ ಹೆಚ್ಚುವರಿ ವಿಶೇಷ ಪ್ರತಿನಿಧಿ ಶ್ರೀ ಸಲೀಂ ಅಹ್ಮದ್, ನಿವೃತ ನ್ಯಾಯಾಧೀಶ ಎಂ.ಕೆ. ಪಾಟೀಲ್, ಕರ್ನಾಟಕ ಭವನದ ನಿವಾಸಿ ಆಯುಕರಾದ ನಿಲಯು ಮಿತಾಶ್, ಕರ್ನಾಟಕ ಭವೆನದ ಉಪ ನಿವಾಸಿ ಆಯುಕ್ತರಾದ ಶ್ರೀಮತಿ ಅನೀಸ್ ಕೆ. ಜಾಯ್, ಸಹಾಯಕ ನಿವಾಸಿ ಆಯುಕ್ತರಾದ ಶ್ರೀ ಶೈಲೇಂದ್ರ ಸಿಂಗ್, ಉಪ ನಿರ್ದೇಶಕ ಡಾ.ಮೈಸೂರು ಗಿರೀಶ, ಕರ್ನಾಟಕ ಭವನದ ಸಿಬ್ಬಂದಿ ವರ್ಗದವರು, ವಿವಿಧ ಕನ್ನಡ ಸಂಘಟನೆಗಳ ಮುಖಂಡರು ಈ ವೇಳೆ ಉಪಸ್ಥಿತರಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮ : ದೆಹಲಿ ಕರ್ನಾಟಕ ಸಂಘದಲ್ಲಿ ಸಂಜೆ ಹಮ್ಮಿಕೊಳ್ಳಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ರಾಜ್ಯ ಸರ್ಕಾರದ ದೆಹಲಿಯ ವಿಶೇಷ ಪ್ರತಿನಿಧಿ ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) ಅವರು, ಕರ್ನಾಟಕದ ಇತಿಹಾಸವನ್ನು ಗಮನಿಸಿದಾಗ ಸರ್ವರಿಗೂ ಸಮಪಾಲು-ಸರ್ವರಿಗೂ ಸಮಬಾಳು ಎಂಬ ತತ್ವದೊಂದಿಗೆ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿರುವ ರಾಜ್ಯ, ಕರ್ನಾಟಕದಲ್ಲಿ ಪ್ರತಿಭೆಗಳಿಗೆ ಕೊರತೆಯಿಲ್ಲ, ಅದರೆ ಅವುಗಳನ್ನು ಬಿಂಬಿಸುವಲ್ಲಿ ನಾವು ವಿಫಲರಾಗಿದ್ದೇವೆ. ನಾವು ಎಲ್ಲೆ ಇರಲಿ ನಾಡು-ನುಡಿ ಸಂಸ್ಕೃತಿಯೊಂದಿಗೆ ಸಾಗೋಣ, ಕರ್ನಾಟಕ ಭವನದ ನಿವಾಸಿ ಆಯುಕ್ತ ನಿಲಯ್ ಮಿತಾಶ್ ಅವರ ನೇತೃತ್ವದಲ್ಲಿ ಉತ್ತಮ ಕೆಲಸವನ್ನು ನಿರ್ವಹಿಸುತ್ತದೆ. ಇದೇ ಮೊದಲ ಬಾರಿಗೆ ದೆಹಲಿಯಲ್ಲಿ ನೆಲಸಿರುವ ಗಣ್ಯ ಕನ್ನಡಿಗರನ್ನು ಗುರುತಿಸಿ ಸನ್ಮಾನಿಸಿರುವುದು ಪ್ರಶಂಸನೀಯ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಗೌರವಾನ್ವಿತ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಹೆಚ್ಚುವರಿ ವಿಶೇಷ ಪ್ರತಿನಿಧಿ ಶ್ರೀ ಸಲೀಂ ಅಹ್ಮದ್ ಅವರು, ಕನ್ನಡಿಗರು ಎಲ್ಲರೊಂದಿಗೆ ಹೊಂದಿಕೊಂಡು

**ರಕ್ತದಾನ ಶಿಬಿರ** : 62 ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ತ ರೆಡ್ ಕ್ರಾಸ್ ಸಂಸ್ಥೆಯ ಸಹಯೋಗದೊಂದಿಗೆ ಕರ್ನಾಟಕ ಭವನದಲಿ ಹಮ್ಮಿಕೊಳ್ಳಲಾಗಿದ್ದ ರಕ್ತದಾನ ಶಿಬಿರದಲ್ಲಿ ಕರ್ನಾಟಕ ಭವನದ ಸಿಬ್ಬಂದಿಗಳು, ಮಾಧ್ಯಮದವರು, ನಿವಾಸಿ ಆಯುಕ್ತರಾದ ನಿಲಯ ಮಿತಾಶ್, ಭಾರತ ಸರ್ಕಾರದ ಹಿರಿಯ ಐಎಎಸ್ ಅಧಿಕಾರಿಗಳಾದ ಸೆಲ್ವಕುಮಾರ್, ಅತುಲ್ ಕುಮಾರ್ ತಿವಾರಿ ಸೇರಿದಂತೆ 50 ಕ್ಕೂ ಹೆಚ್ಚು ಜನರು ರಕ್ತದಾನ ಮಾಡಿದರು. ಕರ್ನಾಟಕ ಭವನದ ವ್ಯದ್ಯಾಧಿಕಾರಿ ಡಾ. ಕಾರ್ತಿಕ್ ಮತ್ತು ಇಂಜಿನಿಯರು ಈಶ್ವರ್ ಕಟ್ಟಿಮನಿ ಶಿಬಿರದ ನೇತೃತ್ವ ವಹಿಸಿದ್ದರು.









ಹೋಗುವ ಮನೋಭಾವದವರು, ಕನ್ನಡ ಭಾಷೆ ಸಂಪದ್ಭರಿತ ಭಾಷೆಯಾಗಿದೆ, ನಾವೆಲ್ಲರೂ ರಾಜ್ಯದ ರಾಯಭಾರಿಗಳಂತೆ ರಾಷ್ಟ್ರ ರಾಜಧಾನಿಯಲ್ಲಿ ಸಾಗೋಣ ಎಂದು ಆಶಿಸಿದರು.

ಸಾಧಕರಿಗೆ ಸನ್ಮಾನ : ಸಮಾರಂಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರನ್ನು ಈ ವೇಳೆ ಸನ್ಮಾನಿಸಲಾಯಿತು. ಸಾಹಿತ್ಯ ಕ್ಷೇತ್ರದಲ್ಲಿ ಎಚ್.ಎಸ್. ಶಿವಪ್ರಕಾಶ್, ಕಾನೂನು ಕ್ಷೇತ್ರದಲ್ಲಿ ಶರತ್ ಎಸ್. ಜವಳಿ, ವೈದ್ಯಕೀಯ ಕ್ಷೇತ್ರದಲ್ಲಿ ಡಾ. ಭಿಮಾ ಭಟ್, ಕ್ರೀಡಾ ಕ್ಷೇತ್ರದಲ್ಲಿ ಶ್ರೀಮತಿ ಮಾಲಾ ಹೊನ್ನತ್ತಿ ಅವರನ್ನು ಸನ್ಮಾನಿಸಲಾಯಿತು.


ನಿವಾಸಿ ಆಯುಕ್ತ ನಿಲಯ್ ಮಿತಾಶ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು, ವೇದಿಕೆಯಲ್ಲಿ ಸನ್ಮಾನಿತರೊಂದಿಗೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಉಪಸ್ಥಿತರಿದ್ದರು.

ಶ್ರೀಮತಿ ಶಮಿತಾ ಮಲ್ನಾಡ್ ಹಾಗೂ ಅವರ ತಂಡ ನಡೆಸಿಕೊಟ್ಟ ಸಂಗೀತ ಕಾರ್ಯಕ್ರಮ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು. ಸುಮಧುರ ಸಂಗೀತಕ್ಕೆ ಪ್ರೇಕ್ಷಕರು ಹೆಜ್ಜೆ ಹಾಕಿದರು. ಸ್ಥಳೀಯ ಮಕ್ಕಳು ನಡೆಸಿಕೊಟ್ಟ ನೃತ್ಯ ಪ್ರಕಾರಗಳು ಜನ-ಮನ ಸೂರೆಗೊಂಡಿತು. ಪ್ರೇಕ್ಷಕರ ಮೆಚ್ಚುಗೆಗೆ ನೃತ್ಯ ಸಂಯೋಜಕರಾದ ಅರುಣ್, ಚಂದನಾ ಹಾಗೂ ಅವರ ತಂಡ ಪಾತ್ರವಾಯಿತು. ಕರ್ನಾಟಕ ಭವನದ ಸಿಬ್ಬಂದಿವರ್ಗದವರು ಹಾಗೂ ಅವರ ಕುಟುಂಬದವರು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ರಾಜ್ಯೋತ್ಸವ ಅಂಗವಾಗಿ ಕರ್ನಾಟಕ ಭವನದ ಸಿಬ್ಬಂದಿ ಹಾಗೂ ಅವರ ಕುಟುಂಬ ವರ್ಗದವರಿಗಾಗಿ ಏರ್ಪಡಿಸಿದ್ದ ವಿವಿಧ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಣೆ ಮಾಡಲಾಯಿತು. ಅ

***ಅಭಿಮತ ವರದಿ***









# ದೆಹಲಿ ಕನ್ನಡ ಶಾಲೆಯಲ್ಲಿ 'ಶಿವರಾಮ ಕಾರಂತರ ನೆನಪು'



ಕನ್ನಡದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಕೆ. ಶಿವರಾಮ ಕಾರಂತರ 115ನೇ ಜನ್ಮದಿನದ ಪ್ರಯುಕ್ತ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ 'ವಿಚಾರ ಸಂಕಿರಣ ಭವನ'ದಲ್ಲಿ 'ಕಾರಂತರ ನೆನಪು' ಕಾರ್ಯಕ್ರಮವು ಇದೇ ಅಕ್ಟೋಬರ್ 10ರಂದು ನಡೆಯಿತು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹಿರಿಯ ಲೇಖಕಿ ಡಾ. ಅಹಲ್ಯಾ ಚಿಂತಾಮಣಿ ಅವರು "ಸಾಹಿತ್ಯ, ಸಂಸ್ಕೃತಿ ಹೀಗೆ ಹಲವು ಪ್ರಕಾರಗಳಲ್ಲಿ ಕೈಯಾಡಿಸಿ 'ನಡೆದಾಡುವ ವಿಶ್ವಕೋಶ' ಎಂದು ಹೆಸರಾದವರೇ ಶಿವರಾಮ ಕಾರಂತರು. ಆಡು ಮುಟ್ಟದ ಸೊಪ್ಪಿಲ್ಲ, ಕಾರಂತರು ಕೈಯಾಡಿಸದ ಕ್ಷೇತ್ರವಿಲ್ಲ ಎಂಬ ಮಾತು ಅವರಿಗೆಯೇ ಅನ್ವರ್ಥಕವಾಗಿತ್ತು. ಗಾಂಧಿ ತತ್ವಕ್ಕೆ ಮಾರು ಹೋದ ಇವರು ಓರ್ವ ಪರಿಸರವಾದಿ, ವಿಜ್ಞಾನಿಯೂ ಹೌದು. ಅವರ ಒಟ್ಟು ಸಾಹಿತ್ಯಕ್ಕಿಂತಲೂ ಅವರ ಬದುಕು ದೊಡ್ಡದು; ಅದೇ ನಮಗೆ ಆದರ್ಶ. ಇಂದು ಅವರನ್ನು ನೆನಪಿಸಿಕೊಳ್ಳುವುದರ ಜೊತೆಗೆ ಅವರ ಕುರಿತಾಗಿ ಇನ್ನಷ್ಟು ತಿಳಿಯುವ ಆಸಕ್ತಿಯನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು" ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್. ಕೃಷ್ಣ ಭಟ್ ಅವರು ಮಾತನಾಡುತ್ತಾ "ಚಲನಶೀಲರಾಗಿದ್ದ ಕಾರಂತರು ಅಷ್ಟೇ ನಿಷ್ಠುರವಾದಿಯಾಗಿದ್ದರು. ಸುಮಾರು 700 ವರ್ಷಗಳಷ್ಟು ಇತಿಹಾಸ ಹೊಂದಿರುವ ಯಕ್ಷಗಾನದಲ್ಲಿ ಹಲವು ಸಾಧ್ಯತೆಗಳ ಜೊತೆ ಪ್ರಯೋಗಗಳನ್ನು ತೆರೆದಿಟ್ಟವರು. ಮೊತ್ತ ಮೊದಲ ಬಾರಿಗೆ ಯಕ್ಷಗಾನವನ್ನು ವಿದೇಶದಲ್ಲಿ ಪ್ರದರ್ಶಿಸಿದ ಖ್ಯಾತಿ ಕಾರಂತರದ್ದು. ಇಂತಹ ಮೇರು ವ್ಯಕ್ತಿತ್ವವನ್ನು ಸಂಸ್ಥೆಯಲ್ಲಿ ಸ್ಮರಿಸಿರುವುದು ಶ್ಲಾಘನೀಯ" ಎಂದರು.

'ನನ್ನ ಮೆಚ್ಚಿನ ಕಾರಂತರು' ವಿಚಾರದ ಕುರಿತಾಗಿ ಉಪನ್ಯಾಸಕರಾದ ಶ್ರೀಮತಿ ಪ್ರೇಮಲತಾ ಹಾಗೂ ವಿದ್ಯಾರ್ಥಿನಿ ಕು। ಜಾಹ್ನವಿ ಮಾತಾಡಿದರು. ಬಳಿಕ ಕಾರಂತರ ಜೀವನದ ಕುರಿತಾದ ದೃಶ್ಯಾವಳಿಗಳನ್ನು ಪ್ರದರ್ಶಿಸಲಾಯಿತು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ ವಿಜಯಾ ಕುಮಾರಿ ಸ್ವಾಗತಿಸಿದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ, ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯಿನಿ ಶ್ರೀಮತಿ ನಳಿನಿ ಹಿರಿಯಣ್ಣ ಅವರು ವಂದಿಸಿದರು. ಶ್ರೀಮತಿ ಲಾವಣ್ಯ ಬಸವರಾಜ್ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಅರವಿಂದ ಬಿಜ್ಜೈ ಕಾರ್ಯಕ್ರಮ ಸಂಯೋಜಿಸಿದ್ದರು. ಅ

***ಅರವಿಂದ ಬಿಜ್ಜೈ***

# ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯ ಜನ್ಮದಿನಾಚರಣೆ

ಭಾರತ ರತ್ನ ಸರ್.ಎಂ. ವಿಶ್ವೇಶ್ವರಯ್ಯ ಅವರ 157ನೇ ಜನ್ಮದಿನವನ್ನು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಆಚರಿಸಲಾಯಿತು. ಸರ್.ಎಂ. ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಂಸ್ಥೆಯ ಮಾನ್ಯ ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ "ಕನ್ನಡ ನಾಡಿನ ಕೀರ್ತಿ ಪತಾಕೆಯನ್ನು ವಿಶ್ವದಾದ್ಯಂತ ಪಸರಿಸಿದ ಮೇಧಾವಿ ಸರ್.ಎಂ. ವಿಶ್ವೇಶ್ವರಯ್ಯ ಅವರ ಜನ್ಮದಿನವನ್ನು 'ಇಂಜಿನಿಯರ್ಸ್ ಡೇ' ಎಂದು ಆಚರಿಸಲಾಗುತ್ತಿದೆ. ಇಂದು ಅವರ ಜನ್ಮದಿನವನ್ನು ಆಚರಿಸುವ ಮೂಲಕ ಪ್ರಾಮಾಣಿಕ ದೇಶಪ್ರೇಮಿಗೆ ಸಂಸ್ಥೆಯು ಗೌರವ ಸಲ್ಲಿಸುತ್ತಿರುವುದು ಅಭಿಮಾನದ ಸಂಗತಿ. ಅವರ ಮಹತ್ವದ ಚಿಂತನೆಗಳೇ ನಮ್ಮ ದೇಶದ ಆರ್ಥಿಕ ಪ್ರಗತಿಗೆ ಬಹಳಷ್ಟು ಕೊಡುಗಯನ್ನು ನೀಡಿವೆ. ಅವರ ಚಿಂತನೆ, ಸರಳತೆ, ಸೌಜನ್ಯತೆ, ಪ್ರಾಮಾಣಿಕತೆಯೇ ನಮಗೆ ಆದರ್ಶಪ್ರಾಯವಾದುದು" ಎಂದು ಹೇಳಿದರು

'ವಿಶ್ವೇಶ್ವರಯ್ಯ ವಿಚಾರಗಳು ಹಾಗೂ ಸಾಧನೆಗಳು' ವಿಷಯದ ಕುರಿತಾಗಿ ಉಪನ್ಯಾಸಕರಾದ ಶ್ರೀಮತಿ ಪ್ರೇಮಲತಾ, ಶ್ರೀಮತಿ ಸೌಮ್ಯ ಹಾಗೂ ವಿದ್ಯಾರ್ಥಿನಿ ಕು। ಶ್ರೇಷ್ಠಾ ಅವರು ಮಾತನಾಡಿದರು. ಶ್ರೀಮತಿ ಮಾಲಾ ಗೋಪಾಲ್ ಪ್ರಾರ್ಥಿಸಿದರು. ಶ್ರೀಮತಿ ನಳಿನಿ ಹಿರಿಯಣ್ಣ ಸ್ವಾಗತಿಸಿದರು. ಶ್ರೀ ಎಚ್.ಎಸ್ ತೇಲಿ ವಂದಿಸಿದರು. ಶ್ರೀಮತಿ ಪರಿಮಳ ಅವರು ಕಾರ್ಯಕ್ರಮ ನಿರೂಪಿಸಿದರು. ಅ

***ಅರವಿಂದ ಬಿಜ್ಜೈ***



# ಗಂಧರ್ವ ಕಲಾವಿದರಿಂದ ರಾಗಮಾಲಿಕಾ ಹಾಗೂ ಹಾಸ್ಯ ಸಂಜೆ ಕಾರ್ಯಕ್ರಮ

ನವದೆಹಲಿಯ ಗಂಧರ್ವ ತಂಡದಿಂದ "ಗಂಧರ್ವ–ರಾಗಮಾಲಿಕಾ" ಹಾಗೂ "ಹಾಸ್ಯ ಸಂಜೆ" ಕಾರ್ಯಕ್ರಮವು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಇದೇ ಅಕ್ಟೋಬರ್ 29ರಂದು ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನವದೆಹಲಿಯ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎ.ಎಸ್ ಜಯಚಂದ್ರ ಅವರು ವಹಿಸಿದ್ದರು.

ಭಾರತ ಸರ್ಕಾರದ ಬುಡಕಟ್ಟು ಸಚಿವಾಲಯದಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿರುವ ಶ್ರೀ ರಮೇಶ್ ಕುಮಾರ್ ಗಂತ ದೀಪ ಬೆಳಗಿಸಿ ಉದ್ಘಾಟಿಸಿದರು. ರಾಜಧಾನಿಯಲ್ಲಿ ಕನ್ನಡದ ಕಂಪು ಹರಡಲು ಈ ಬಗೆಯ ಕಾರ್ಯಕ್ರಮಗಳು ನಿರಂತರ ಜರುಗಲಿ ಎಂದು ಈ ಸಂದರ್ಭದಲ್ಲಿ ಅವರು ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾಗಿ ದೆಹಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ರಂಗನಾಥ ಸಿಂಗಾರಿಯವರು, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶ್ರೀ ಸರವು ಕೃಷ್ಣ ಭಟ್, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಉಪಸ್ಥಿತರಿದ್ದರು. ಕರ್ನಾಟಕ ಸಂಗೀತ ವಿದ್ವಾಂಸರಾದ ಪಂಡಿತ್ ಲೋಕನಾಥ ಶರ್ಮಾ ಅವರು ಕೂಡ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

'ಗಂಧರ್ವ' ದೆಹಲಿ ಕರ್ನಾಟಕ ಸಂಘದಿಂದ ಚಿಗುರಿದ ಮೊಳಕೆ, ದೆಹಲಿ ಕರ್ನಾಟಕ ಸಂಘವು ಸುಮಾರು 5–6 ವರ್ಷಗಳಿಂದ ತಾಯಿ ಸ್ಥಾನದಲ್ಲಿ ನಿಂತು ಕಲಾವಿದರನ್ನು ಪೋಷಿಸಿ ಬೆಳೆಸುತ್ತಿದೆ. ಎಷ್ಟೋ ಜನರು ಈ ವೇದಿಕೆಯಿಂದ ಕಲಾವಿದರಾಗಿದ್ದಾರೆ, ಇದಕ್ಕೆ ಮೂಲ ಕಾರಣ ದೆಹಲಿ ಕರ್ನಾಟಕ ಸಂಘ. ಉದಾಹರಣೆ, ನೃತ್ಯ ತರಬೇತಿ, ಸಂಗೀತ ತರಬೇತಿ, ನಾಟಕ ತರಬೇತಿಯನ್ನು ಕರ್ನಾಟಕ ಸಂಘದಿಂದ ಪಡೆದು ಒಂದೇ ವೇದಿಕೆ ಮೇಲೆ 150ಕ್ಕೂ ಹೆಚ್ಚು ಕಲಾವಿದರು ಹಾಡಿ ಕುಣಿದಿದ್ದಾರೆ. ಖ್ಯಾತ ಕಲಾವಿದರಾದ ಹಂಸಲೇಖಾ, ಟಿ.ಎಸ್. ನಾಗಾಭರಣ, ಬಿ.ಕೆ. ಸುಮಿತ್ರಾ ಇವರೆಲ್ಲರುಗಳ ತರಬೇತಿ ಪಡೆದು ಈ ಗಂಧರ್ವ ತಂಡ, ಗಾನ ಗಂಧರ್ವ ತಂಡವಾಗಿದೆ. ಇದೇ ರೀತಿಯಲ್ಲಿ ಇನ್ನೂ ಅನೇಕ ತಂಡಗಳು ಈ ವೇದಿಕೆ ಮೂಲಕ ಪ್ರಖ್ಯಾತಿ ಪಡೆಯುತಿವೆ, ಬೆಳೆಯುತ್ತಿವೆ, ಇದಕ್ಕೆಲ್ಲಾ ಮೂಲ ಕಾರಣ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜರವರು ಮತ್ತು ಪದಾಧಿಕಾರಿಗಳು ಹಾಗೂ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವ ಮೂಲಕ ಈ ದಿನ ನಾವು ಈ ವೇದಿಕೆ ಮೇಲೆ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ ಎಂದು ಗಂಧರ್ವ ತಂಡದ ಸಂಚಾಲಕ ಶ್ರೀ ರಾಜ್ ಕುಮಾರ್ ಅವರು ತಮ್ಮ ಸ್ವಾಗತ ಭಾಷಣದಲ್ಲಿ ಹೇಳಿದರು. ಗಂಧರ್ವ ತಂಡಕ್ಕೆ ದೊಡ್ಡ ಮಟ್ಟದಲ್ಲಿ ಮೊದಲ ಅವಕಾಶ ದೊರೆತದ್ದು, ದೆಹಲಿಯ "ತಾಲ್‌ಕಟೋರಾ" ಸಭಾಂಗಣದಲ್ಲಿ ನಡೆದ "ನಾಡಪ್ರಭು ಕೆಂಪೇಗೌಡ ಫೌಂಡೇಶನ್" ವತಿಯಿಂದ ನಡೆದ ಅದ್ದೂರಿ ಕಾರ್ಯಕ್ರಮದಲ್ಲಿ. ಆಗಿನ ರಾಷ್ಟ್ರಪತಿಗಳಾದ ಶ್ರೀ ಪ್ರಣವ್ ಮುಖರ್ಜಿ, ಮಾಜಿ ಪ್ರಧಾನಿ ಶ್ರೀ ಎಚ್.ಡಿ. ದೇವೇಗೌಡರು ಹಾಗೂ ಅನೇಕ ರಾಜಕೀಯ ಮುಖಂಡರು ಹಾಗೂ ಚಲನಚಿತ್ರ ರಂಗದ ದಿಗ್ಗಜರ ಸಮ್ಮುಖದಲ್ಲಿ, ಹಿರಿಯ ಖ್ಯಾತ ನಿರ್ದೇಶಕರಾದ ಟಿ. ಎಸ್. ನಾಗಾಭರಣ ಅವರ ಮಾರ್ಗದರ್ಶನದಲ್ಲಿ ಹಾಡಿದ ಹೆಗ್ಗಳಿಕೆ ಗಂಧರ್ವ ತಂಡದ್ದು.

ಬೆಂಗಳೂರಿನಿಂದ ಚಲನಚಿತ್ರರಂಗದ ಖ್ಯಾತ ಹಾಸ್ಯ ಕಲಾವಿದರುಗಳಾದ ಬ್ಯಾಂಕ್ ಜನಾರ್ಧನ್, ರೇಖಾ ದಾಸ್ ಹಾಗೂ ಎಂ.ಎನ್. ಸುರೇಶ್ ಅವರು ಆಗಮಿಸಿ, ಹಲವಾರು ಹಾಸ್ಯ ಪ್ರಸಂಗಗಳನ್ನು ಅಭಿನಯಿಸಿ ಕಿಕ್ಕಿರಿದು ತುಂಬಿದ್ದ ಸಭಿಕರನ್ನು ನಗೆಗಡಲಲ್ಲಿ ತೇಲಿಸಿದರು.

ಗಂಧರ್ವ ತಂಡದ ಕಲಾವಿದರುಗಳಾದ ಶುಭ ದೇವಿಪ್ರಸಾದ್, ಪೂರ್ಣಿಮಾ ಅಡಿಗ, ಶ್ರೇಯಸ್ ಜೋಗಿ, ಸ್ವಾತಿ ಚಂದ್ರಶೇಖರ್, ಗಂಗಾಧರ್, ಪೂಜಾ ಪಿ. ರಾವ್, ಕುಮಾರ್ ಎಸ್, ರಂಗನಾಥ ಸಿಂಗಾರಿ, ಜಿತೇಶ್, ರಾಜ್‌ಕುಮಾರ್ ಹಾಗೂ ಚಿದಂಬರ ಕೋಟೆಯವರು ಸುಶ್ರಾವ್ಯವಾಗಿ ಹಾಡಿ ಮನರಂಜಿಸಿದರು. ಅನೇಕ ನೃತ್ಯ ಕಲಾವಿದರು ದೆಹಲಿ ಹಾಗೂ ಗುರುಗ್ರಾಮದಿಂದ ಆಗಮಿಸಿ ತಮ್ಮ ನೃತ್ಯದಿಂದ ಕಾರ್ಯಕ್ರಮದ ವಿಭಿನ್ನತೆಯನ್ನು ವೈಭವೀಕರಿಸಿದರು. ಬಾಲಕಲಾವಿದರಾದ ಹಿತಶ್ರೀ ರಾಘವೇಂದ್ರ, ಪೃಥ್ವಿ ಕಟ್ಟಿಮನಿ, ಸೂರಜ್ ತಿಮ್ಮಪ್ಪ, ಶ್ರುತಿ ಪ್ರಭಾಕರ್, ಸೌಮ್ಯ ರಾಜ್‌ಕುಮಾರ್ ಮತ್ತಿತರರು ಭಾಗವಹಿಸಿದರು. ಈ ಕಾರ್ಯಕ್ರಮದಲ್ಲಿ ಪ್ರಖ್ಯಾತ ಭರತನಾಟ್ಯ ಕಲಾವಿದೆ ಕುಮಾರಿ ಸಪ್ನಾ ಅತ್ತಾವರ್ ಅವರು ತಮ್ಮ ಅಮೋಘ ನೃತ್ಯ ಪ್ರದರ್ಶನದಿಂದ ಪ್ರೇಕ್ಷಕರ ಮನ ಸೂರೆಗೊಂಡರು. ಈ ಬಾರಿ ವಿಶೇಷ ಪ್ರಯೋಗವಾಗಿ "ಗಿಟಾರ್ ಲೈವ್" ಪ್ರದರ್ಶನದಲ್ಲಿ ಮೊಟ್ಟಮೊದಲಿಗೆ ಅಮೋಘ ಪ್ರದರ್ಶನ ನೀಡಿದ ಜಿತೇಶ್ ಬಿ.ಎಚ್. ಹಾಗೂ ಜೊತೆಗೆ ಕೆಲವು ಹಿಂದಿ ಹಾಡುಗಳ ತುಣುಕುಗಳನ್ನು ವಿಶೇಷವಾಗಿ ಹಾಡಿದ ಶ್ರೇಯಸ್ ಜೋಗಿಯವರ ಜೋಡಿ ಪ್ರೇಕ್ಷಕರ ಪ್ರಶಂಸೆ ಗಳಿಸಿತು.

ಕಲಾಪೋಷಕರಾದ ಡಾ. ಶಶಿಕುಮಾರ್, ಶ್ರೀ ಬಿ.ಕೆ. ಬಸವರಾಜು ಹಾಗೂ ಕರ್ನಾಟಕ ಭವನದ ಶ್ರೀ ರಾಧಾಕೃಷ್ಣ ಕಾರ್ಯಕ್ರಮದ ಯಶಸ್ಸಿಗೆ ಕಾರಣಕರ್ತರಾದರು. ಶ್ರೀ ಸೋಮನಾಥ ಬಿರಾದಾರ್ ಅವರು ಧ್ವನಿ ಸುರುಳಿಗಳನ್ನು ವ್ಯವಸ್ಥಿತವಾಗಿ ನಡೆಸಿಕೊಟ್ಟರು. ರಾಜ್‌ಕುಮಾರ್ ಹಾಗೂ ಚಿದಂಬರ ಕೋಟೆ ಅವರು ಕಾರ್ಯಕ್ರಮದ ಸಂಚಾಲಕರಾಗಿದ್ದರು. ಕಾರ್ಯಕ್ರಮವನ್ನು ಶ್ರೀಮತಿ ಪೃಥ್ವಿ ಕಾರಿಂಜೆಯವರು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಅ

*ಗಂಧರ್ವ ತಂಡ.*



## ದುಬಾಯಿಯ ಜೆ.ಎಸ್.ಎಸ್. ಅಕಾಡೆಮಿಯಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 102ನೇ ಜಯಂತಿ ಆಚರಣೆ



ಶ್ರೀ ಸುತ್ತೂರು ಸಂಸ್ಥಾನದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಈ ಶತಮಾನದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಮೂಲಕ ಸಾವಿರಾರು ಜನರಿಗೆ ವಿದ್ಯಾದಾನ ಮಾಡಿರುವುದಲ್ಲದೇ ಸಾಮಾಜಿಕವಾಗಿ ಬಹುಪಯೋಗಿ ಕಲ್ಯಾಣ ಕಾರ್ಯಕ್ರಮಗಳನ್ನು ಮಾಡಿ ಎಲ್ಲರಿಗೂ ಪ್ರಾರ್ಥ:ಸ್ಮರಣೀಯರಾಗಿದ್ದಾರೆ ಎಂದು ಕೇಂದ್ರ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ನಿಕಟಪೂರ್ವ ಪ್ರಾದೇಶಿಕ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಕೆ. ಜಯಪ್ರಕಾಶ್ ರಾವ್ ತಿಳಿಸಿದರು. ಅವರು ದುಬಾಯಿಯಲ್ಲಿ ಡಾ. ಅಬ್ದುಲ್ ಕಲಾಂಜಿ ಅವರಿಂದ ಉದ್ಘಾಟನೆಗೊಂಡು, ಇದೀಗ ಹಲವು ವರ್ಷಗಳಲ್ಲಿ ಹೆಸರು ಪಡೆದಿರುವ ಜೆ.ಎಸ್.ಎಸ್. ಸಂಸ್ಥೆಯ ಅಂತರರಾಷ್ಟ್ರೀಯ ವಿದ್ಯಾಲಯದ ಸಭಾಂಗಣದಲ್ಲಿ ಇತ್ತೀಚಿಗೆ ಏರ್ಪಟ್ಟ ಶ್ರೀ ರಾಜೇಂದ್ರ ಸ್ವಾಮಿಗಳ 102ನೇ ಜಯಂತಿ ಮಹೋತ್ಸವದ ಆಚರಣೆ ಸಮಾರಂಭದ ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡುತ್ತಿದ್ದರು. ಈ ಸಂಧರ್ಭದಲ್ಲಿ ವಿದ್ಯಾರ್ಥಿಗಳಿಗೆ ಡಾ. ಅಬ್ದುಲ್ ಕಲಾಂಜಿಯವರ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಪ್ರಾರಂಭದಲ್ಲಿ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಕ ಅಧಿಕಾರಿ ಡಾ.ಶಿವಕುಮಾರವರು ಸ್ವಾಗತಿಸಿ ಸಂಸ್ಥೆ ನಡೆದು ಬಂದ ದಾರಿಯನ್ನು ಪ್ರಸ್ತಾಪಿಸಿ, ಇದೀಗ ಸಜ್ಜುಗೊಂಡ ಹೊಸ ಸಭಾಂಗಣದಲ್ಲಿ ನಿಕಟಪೂರ್ವ ರಾಷ್ಟ್ರಪತಿ ಡಾ.ಎ.ಪಿ.ಜೆ. ಅಬ್ದುಲ್ ಕಲಾಂಜಿಯವರ ಜೀವನ ಹಾಗೂ ಗುರಿ ಸಾಧನೆಗಳ ಬಗ್ಗೆ ಶ್ರೀ ಜಯಪ್ರಕಾಶ್ ರಾವ್ ಮಾತನಾಡುತ್ತಿರುವುದನ್ನು ಅತ್ಯಂತ ಸಮಯೋಚಿತವಾಗಿ ಮೆಚ್ಚಿಕೊಂಡರು. ಇದೇ ವೇಳೆ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಕುರಿತಾದ ನೂತನ ಕಿರುಚಿತ್ರವನ್ನು ವಿದ್ಯಾರ್ಥಿಗಳಿಗೆ ತೋರಿಸಲಾಯಿತು.

ಕೊನೆಯಲ್ಲಿ ಶಾಲೆಯ ಉಪಪ್ರಾಂಶುಪಾಲೆ ಶ್ರೀಮತಿ ಜತಿನ್ ಪಂಜಾಬಿ ವಂದಿಸಿದರು.

ಶ್ರೀ ಜಯಪ್ರಕಾಶ್ ರಾವ್‌ರವರು ಪ್ರಸ್ತುತ ಮೈಸೂರು ಪೋಲಿಸ್ ಘಟಕದ ಗೌರವ ಮಾಧ್ಯಮ ಹಾಗೂ ಸಾರ್ವಜನಿಕ ಸಂಪರ್ಕ ಸಲಹೆಗಾರರಾಗಿದ್ದಾರೆ. ಅ

***ಅಭಿಮತ ವರದಿ***

**ಅಭಿನಂದನೆ**

## ದೆಹಲಿ ಒಕ್ಕಲಿಗ ಗೌಡ ಸಂಘದ ನೂತನ ಕಾರ್ಯಕಾರಿ ಸಮಿತಿ



ದೆಹಲಿ ಒಕ್ಕಲಿಗ ಗೌಡ ಸಂಘದ ನೂತನ ಕಾರ್ಯಕಾರಿ ಸಮಿತಿ ದೆಹಲಿ ಒಕ್ಕಲಿಗ ಗೌಡ ಸಂಘವು ಸೆಪ್ಟೆಂಬರ್ 24ರಂದು ದೆಹಲಿ ಕನ್ನಡ ಶಾಲಾ ಆವರಣದಲ್ಲಿ ಸಭೆ ಸೇರಿ ತನ್ನ ನೂತನ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಿತು. ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷರಾದ ಡಾ. ಕೆ.ಎಸ್. ಸೋಮಶೇಖರ್ ಅವರು ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ನೂತನ ಅಧ್ಯಕ್ಷರಾಗಿ ಇ.ಸಿ. ವಿದ್ಯಾಸಾಗರ್ ಅವರು ಆಯ್ಕೆಯಾಗಿದ್ದಾರೆ. ಇತರ ಪದಾಧಿಕಾರಿಗಳು ಮತ್ತು ಸದಸ್ಯರು: ಬಿ.ಎನ್. ಮೋಹನ್ ಕುಮಾರ್ ಮತ್ತು ಸರೋಜ ಮಾಧವ (ಉಪಾಧ್ಯಕ್ಷರು), ಪ್ರಶಾಂತ್ ಕುಮಾರ್ ಬಿ.ಆರ್. (ಪ್ರಧಾನ ಕಾರ್ಯದರ್ಶಿ), ಕೆ.ಪಿ. ಮೋಹನ್ ಕುಮಾರ್ (ಖಜಾಂಚಿ), ಎ.ಟಿ. ಶ್ರೀನಿವಾಸ ಮತ್ತು ಲಿಂಗರಾಜು ಎಂ.ಕೆ. (ಜಂಟಿ ಕಾರ್ಯದರ್ಶಿಗಳು) ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಅಶ್ವಥ್ ಗೌಡ, ಮಂಜು ಗೌಡ, ಎಚ್.ಎಸ್. ಜಗದೀಶ, ಗಿರೀಶ್ ಎಸ್., ಕೃಷ್ಣಪ್ಪ ಎಂ., ಚಂದ್ರಶೇಖರ ಕೆ., ಜಯ ಶ್ರೀನಿವಾಸ, ಮೀನಾ ವಸಂತ್, ಶೋಭಾ ಆಯ್ಕೆಯಾಗಿದ್ದಾರೆ. ಅ

***ಅಭಿಮತ ವರದಿ***


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**

A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020


PHONE:
011-40520770


MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
Nov-2017, Vol. No.28, Issue No.1, Price Rs.1/-
RNI Regn. No. 53405/91, DL-SW-1/4016/16-18
Printout Date : Nov 8th / 9th, Postal Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022,
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.







## ಚಂಡೀಗಢ ಪ್ರವಾಸದ ಆನಂದದ ಕ್ಷಣಗಳು



